ಕನ್ನಡ ಮಾಸಿಕ

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 1 | ಜೂನ್ 2025 | ಸಂಚಿಕೆ: 12 | ಪುಟಗಳು: 17

## ವಾರ್ಷಿಕೋತ್ಸವ ವಿಶೇಷ

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ, ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಒಗ್ಗಟ್ಟಿನಲ್ಲಿ ಬಲವಿದೆ

ಜೀವನದಲ್ಲಿ ಒಗ್ಗಟ್ಟಿನ ಸಹಬಾಳ್ವೆ ಅತ್ಯಗತ್ಯ. ಪ್ರಾಣಿ, ಪಕ್ಷಿಗಳು ಕೂಡ ಒಗ್ಗಟ್ಟಿನಿಂದ ಜೀವನ ಸಾಗಿಸುತ್ತಿರುವುದು ನಮ್ಮ ಕಣ್ಮುಂದೆ ಇರುವ ಪ್ರತ್ಯಕ್ಷ ಸಾಕ್ಷಿಗಳು.

ಮುಂಜಾನೆ ಚುಮು ಚುಮು ಚಳಿಯಲ್ಲಿ ತಂಪಾದ ಗಾಳಿ ಬೀಸುತ್ತಿರಲು, ಮನಸ್ಸಿಗೆ ಮುದ ನೀಡಿದ್ದು ಸುಳ್ಳಲ್ಲ. ಬಿಸಿ ಬಿಸಿ ಕಾಫಿ ಕಪ್ ಜೊತೆಗೆ ಕಿಟಿಕಿ ಪಕ್ಕ ಕುಳಿತು ಪ್ರಕೃತಿ ಸೌಂದರ್ಯದ ಜೊತೆಗೆ ಕಾಫಿ ರುಚಿಯ ಸವಿಯುತ್ತಿದ್ದೆ.

ಬಾನಂಗಳದಲ್ಲಿ ಚೆಲುವಿನ ಚಿತ್ತಾರ, ಮೋಡ ಕವಿದ ವಾತಾವರಣ, ಮರ ಗಿಡಗಳ ಮೇಲೆ ಇಬ್ಬನಿ ಹನಿಗಳು ಮುತ್ತಿನ ಹರಳಿನಂತೆ ಕಂಗೊಳಿಸುತ್ತಿದ್ದವು. ಜೋರಾಗಿ ಗಾಳಿ ಬೀಸುತ್ತಿದ್ದಂತೆ ಮನೆ ಮುಂದಿನ ಮರದ ಮೇಲಿದ್ದ ಕಾಗೆ ಗೂಡು ರೆಂಬೆ ಮುರಿದು ದೊಪ್ಪನೆ ಕೆಳಗೆ ಬಿತ್ತು.

ಗೂಡಿನೊಳಗಿರುವ ಮರಿ ಕಾಗೆ ಭಯದಿಂದ ಕಾ..ಕಾ.. ಎನ್ನಲು, ಅದರ ಧ್ವನಿ ಕೇಳಿ ಆಹಾರ ಹುಡುಕಲು ಹೊರಟಿದ್ದ ಸಂಘ ಪರಿವಾರ ಕಾಗೆಗಳು ಹಾರಿ ಬಂದವು. ಧರೆಯೊಳಗಿನ ಚರಂಡಿಯಲ್ಲಿ ಬಿದ್ದು ಒದ್ದಾಡುತ್ತಿದ್ದ ಮರಿ ಕಾಗೇನ ಗೂಡಿನಿಂದ ಮೇಲೆತ್ತಲು ಹರ ಸಾಹಸ ಪಟ್ಟು... ಹೇಗೂ ಮೇಲೆತ್ತಿದವು, ಒಗ್ಗಟ್ಟಿನಲ್ಲಿ ಬಲವಿದೆ ಎಂದು ತೋರಿಸಿ ಕೊಟ್ಟವು. ತನಗೆ ಒಂದು ತುತ್ತು ಆಹಾರ ಸಿಕ್ಕಿದರೆ ಸಾಕು, ಎಲ್ಲರನ್ನು ಕರೆದು ಜೊತೆಗೆ ಆಹಾರ ಸೇವಿಸುವುದು ಅದರ ಒಗ್ಗಟ್ಟಿನ ಗುಣ.

ಹಾಗೆಯೇ ಪ್ರಾಣಿಗಳು ಕೂಡಾ ಎಲ್ಲೇ ಹೋಗಲಿ, ಗುಂಪು ಗುಂಪಾಗಿ ಹೋಗುತ್ತಾ..., ಎಷ್ಟೇ ಕಷ್ಟ ಬಂದರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿ ಕಷ್ಟದಿಂದ ಪಾರಾಗಿ ಒಗ್ಗಟ್ಟು ಪ್ರದರ್ಶಿಸುವುದು.

ಒಮ್ಮೆ ನಮ್ಮ ಕ್ಲಾಸಿನಲ್ಲಿ ಒಂದು ಘಟನೆ ನಡೆಯಿತು. ಅದು ನೆನಪಿಗೆ ಬಂತು, ಅದನ್ನು ತಮ್ಮ ಮುಂದೆ ಇಡುವ ಒಂದು ಕಿರು ಪ್ರಯತ್ನ.

ಒಂದೊಮ್ಮೆ ಕ್ಲಾಸ್ ಟೀಚರ್ ಕ್ಲಾಸಿಗೆ ಬರುವುದು ಲೇಟಾಯಿತು. ವಿದ್ಯಾರ್ಥಿಗಳೆಲ್ಲರೂ ಮಾತಿನ ಭರಾಟೆಯಲ್ಲಿ ತೊಡಗಿದೆವು. ಅಷ್ಟರಲ್ಲಿ ಇಬ್ಬರು ಹುಡುಗರು ಒಂದು ಪೆನ್ಸಿಲಿನ ವಿಷಯವಾಗಿ ವಾದಕ್ಕೆ ಇಳಿದರು. ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸಿದರು.

ಟೀಚರ್ ಕ್ಲಾಸಿಗೆ ಪ್ರವೇಶಿಸಲು, ಮಕ್ಕಳು ಜಗಳ ನಿಲ್ಲಿಸಿದರು. ಮಕ್ಕಳ ಜಗಳ ನೋಡಿ ಬುದ್ಧಿ ಮಾತು ಹೇಳಿ ಎಲ್ಲರ ಕೈಗೆ ಒಂದು ಪೇಪರ್ ಕೊಟ್ಟು ಹರಿದು ಹಾಕಲು ಹೇಳಿದರು.

ಏನಿದು ಕ್ಲಾಸಿನಲ್ಲಿ ಎಷ್ಟೊಂದು ಗಲಾಟೆಯಾಗುತ್ತಿದ್ದರೂ ನಮಗೆ ಯಾರಿಗೂ ಹೊಡೆಯದೆ, ಗದರದೆ ಹಾಳೆ ಹರಿಯಲು ಕೊಟ್ಟಿದ್ದಾರೆ, ಏನಾಗಿದೆ ನಮ್ಮ ಟೀಚರಿಗೆ? ಎನ್ನುತ್ತಾ ಎಲ್ಲರೂ ಕ್ಷಣಾರ್ಧದಲ್ಲಿ ಹಾಳೆ ಹರಿದು ಹಾಕಿ ಖುಷಿ ಪಟ್ಟೆವು.

ಮುಗ್ಧ ಮಕ್ಕಳ ಖುಷಿ ನೋಡಿ ಮತ್ತೆ ಹತ್ತಾರು ಹಾಳೆಗಳಿರುವ ಒಂದು ಪುಸ್ತಕ ತಂದು ಒಬ್ಬೊಬ್ಬರ ಕೈಗೆ ಕೊಟ್ಟು ಹರಿದು ಹಾಕಲು ಹೇಳಿದರು. ಅದನ್ನು ಯಾರಿಂದಲೂ ಹರಿಯಲು ಸಾಧ್ಯವಾಗಲಿಲ್ಲ.

ಇದನ್ನು ಗಮನಿಸಿದ ಉಪಾಧ್ಯಾಯರು "ನೋಡಿದ್ದೀರಾ ಮಕ್ಕಳೇ.. ಒಂದೊಂದು ಹಾಳೆ ಎಷ್ಟು ಬೇಗ ಕಟ್ ಮಾಡಿದ್ದೀರಿ. ಆದರೆ ಎಲ್ಲಾ ಹಾಳೆ ಒಟ್ಟಿಗೆ ಜೋಡಿಸಿದಾಗ ಯಾರೊಬ್ಬರಿಂದಲೂ ಹರಿಯಲು ಆಗಲಿಲ್ಲ. ಇದರಿಂದ ನಿಮಗೇನು ಗೊತ್ತಾಯಿತು?" ಅಂದರು.

"ಒಗ್ಗಟ್ಟಿನಲ್ಲಿ ಬಲವಿದೆ" ಅನ್ನುವುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೇ? ಎಲ್ಲರೂ ಜೊತೆಗಿದ್ದರೆ ಯಾವ ತೊಂದರೆ ಆಗಲ್ಲ... ಎಂತಹ ಕಷ್ಟ ಬಂದರೂ ಎದುರಿಸಬಹುದು. ಇನ್ನು ಮುಂದೆ ಎಲ್ಲರೂ ಪ್ರೀತಿಯಿಂದ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ನೆಮ್ಮದಿಯಿಂದ ಬಾಳೋಣ ಎಂದಾಗ ಮಕ್ಕಳು ಖುಷಿ ಪಟ್ಟಿದ್ದು ಸುಳ್ಳಲ್ಲ.

ಹಾಗೆಯೇ ಯಾವುದೇ ಒಂದು ಸಂಘ ಸಂಸ್ಥೆಯನ್ನು ಕಟ್ಟುವುದು ಸುಲಭ, ಆದರೆ ಅದನ್ನು ಉಳಿಸಿ ಬೆಳೆಸುವುದು ಅಷ್ಟು ಸುಲಭದ ಕೆಲಸವಲ್ಲ. ಪ್ರತಿಯೊಬ್ಬರೂ ಭೇದ ಭಾವ ಮರೆತು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿದಾಗ ಸಮಾಜದಲ್ಲಿ ಒಂದು ಮಾದರಿ ಸಂಸ್ಥೆಯಾಗಿ, ಹೆಮ್ಮರವಾಗಿ ಬೆಳೆಯಲು ಸಾಧ್ಯ. ಒಗ್ಗಟ್ಟು ಇದ್ದಾಗ ಮಾತ್ರ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳನ್ನು ಸುಲಭವಾಗಿ ಗೆಲ್ಲಬಹುದು. ಅಧಿಕಾರ ಕೈನಲ್ಲಿ ಇದೆ ಎಂದು ದರ್ಪದಿಂದ ನಾನು ನನ್ನದು ಎಲ್ಲವೂ ನನ್ನಿಂದ ಎನ್ನುವ ಮಾತು, ಇತರರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಮಾತು, ಊಹಿಸಲು ಅಸಾಧ್ಯ. ನಾವು ನಮ್ಮದು ಎನ್ನುವುದು ಬಂದಾಗ ಎಲ್ಲವೂ ಎಷ್ಟೊಂದು ಸುಂದರ! ಎಲ್ಲವನ್ನೂ ಸುಲಭವಾಗಿ ಎದುರಿಸಬಹುದು.

ಅಂತೆಯೇ ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ ಬೆಂಗಳೂರು ಸಾಹಿತ್ಯ ಕ್ಷೇತ್ರದಲ್ಲಿ ಒಗ್ಗಟ್ಟು ಪ್ರದರ್ಶಿಸಿದ್ದರಿಂದ "ಶೆಟ್ಟಿಗಾರ ವಾಣಿ" ಮಾಸ ಪತ್ರಿಕೆಯು ತನ್ನ ಒಂದು ವರ್ಷ ಪೂರೈಸುತ್ತಿರುವುದು ಸಂತೋಷದ ವಿಷಯ ಹಾಗೂ ಅಭಿನಂದನಾರ್ಹ. "ಒಗ್ಗಟ್ಟಿನಲ್ಲಿ ಬಲವಿದೆ" ಎನ್ನುವುದನ್ನು ತೋರಿಸಿರುವುದು ಅಷ್ಟೇ ಸತ್ಯ!



ಕಮಲಾಕ್ಷಿ ಶೆಟ್ಟಿಗಾರ್
ರಾಮಗೊಂಡನಹಳ್ಳಿ ,
ಬೆಂಗಳೂರು

# ಬಸಳೆ ಬೆಳೆಸಿ

## ಬಸಳೆ ಕಡ್ಡಿ /ಬಳ್ಳಿಯಿಂದ ಬಸಳೆಯನ್ನು ಟೆರೇಸಿನಲ್ಲಿ ಬೆಳೆಸುವ ವಿಧಾನ



1 ಕೆ.ಆರ್. ಮಾರುಕಟ್ಟೆ ಅಥವಾ ಮಂಗಳೂರು ಸ್ಟೋರ್ ನಿಂದ ಬಸಳೆಯನ್ನು ತನ್ನಿ



2 ಬಳ್ಳಿಯನ್ನು ಈ ರೀತಿ ಕತ್ತರಿಸಿಕೊಳ್ಳಿ



3 ಜನ ಔಷಧಿಯ 1 ಕೇಜಿ ಚವನಪ್ರಾಸ್ ಖಾಲಿ ಬಾಟಲ್ ಉಪಯೋಗಿಸಿ



4 ಅರ್ಧ ತುಂಬಿದ ಶುದ್ಧ ನೀರಿನ ಬಾಟಲ್ (ಪಾರದರ್ಶಕ/ ಅಪಾರದರ್ಶಕ).



5 ಮೇಲಿನ ಶುದ್ಧ ನೀರಿನಲ್ಲಿ 4ರಿಂದ 5ದಿನ ಎರಡು ಬಾರಿ ಬದಲಿಸಿ. ಬಿಳಿ ಬೇರು ಬರುವುದು.



6 ಬೇರು ಬಂದ ಬಳ್ಳಿಯನ್ನು ಪಾಂಟಿಂಗ್ ಮಿಕ್ಸ್ ಇರುವ ಪಾಟಿನಲ್ಲಿ ನೆಡಿ. ನಿಯಮಿತವಾಗಿ ನೀರು ಮತ್ತು ಹಸುವಿನ ಗೊಬ್ಬರ ಹಾಕುತ್ತಿರಿ.



7 ಚಪ್ಪರದಲ್ಲಿ ಬೆಳೆದ ಬಸಳೆ.



ನಾಗಪ್ಪ ನಟರಾಜ,
ಬಸವನಗುಡಿ, ಬೆಂಗಳೂರು



AI generated image: No photo credits required

# ಶಂಭು ಮಾಸ್ಟ್ರ ನಾಗರಬೆತ್ತ

ಇಂದಿನ ಕಾಲದ ಮಕ್ಕಳು ನಾಗರಬೆತ್ತದ ಪೆಟ್ಟು ಬಿಡಿ, ನಾಗರಬೆತ್ತವನ್ನೇ ನೋಡಿರಲಿಕ್ಕಿಲ್ಲ. ಹಾಗಾಗಿ ಕಥೆಗೆ ಬರುವ ಮೊದಲು ನಾಗರಬೆತ್ತದ ಬಗ್ಗೆ ಒಂದು ಪುಟ್ಟ ವಿವರಣೆಯ ಅಗತ್ಯವಿದೆ. ನಮ್ಮ ಕಾಲದಲ್ಲಿ ವಿದ್ಯಾರ್ಥಿಗಳ ಯಶಸ್ಸಿಗೆ, ಮಕ್ಕಳ ಶಿಸ್ತುಬದ್ಧ ಜೀವನಕ್ಕೆ ನಾಗರಬೆತ್ತದ ಕೊಡುಗೆ ಮಹತ್ವವಾಗಿತ್ತು. ಮಾಸ್ಟ್ರ ಕೈಯಲ್ಲಿರುವ ನಾಗರಬೆತ್ತಕ್ಕೆ ಮಕ್ಕಳ ಬೆನ್ನು, ಕುಂಡೆ, ಮೃದುವಾದ ಅಂಗೈ ಕಂಡರೆ ಏನೋ ಪ್ರೀತಿ. “ರಪ್..” ಎಂದು ಬುಸುಗುಟ್ಟುತ್ತಾ ಒಂದು ಬರೆ ಬಿದ್ದರೆ ಸಾಕು! ಅದರ ನೋವು “ಆಹಾ... ಸವಿದವನೇ ಬಲ್ಲ ಬೆತ್ತದ ರುಚಿಯ!” “ಜಿಬುಕ್” ಎಂದು ಪೆಟ್ಟು ಬಿದ್ದಾಗ ದೇಹದ ನರನಾಡಿಗಳಲ್ಲಿ ಮಿಂಚು ಸಂಚಾರವಾಗ್ತಿತ್ತು! ಕಣ್ಣಿನಲ್ಲಿ ನೀರು, ಮೂಗಿನಲ್ಲಿ ಸಿಂಬಳ ಎಲ್ಲ ಒಟ್ಟಿಗೆ ಸುರಿಯುತ್ತಿತ್ತು. ಅದರ ನೋವು, ಪೆಟ್ಟಿನ ದಡಿಕೆ ಶಮನವಾಗಲು ಒಂದು ದಿನವಾದರೂ ಬೇಕಿತ್ತು. ಮಕ್ಕಳಿಗೆ ಮನೆಯಲ್ಲಿ “ಪುಳಿತ್ತ ಅಡರ್” ಹಾಗೂ ಶಾಲೆಯಲ್ಲಿ “ನಾಗರಬೆತ್ತ” ಎರಡೂ ಕಾಲನ ದಂಡವಿದ್ದಂತೆ! ಒಂದು ಮನೆಯಲ್ಲಿ ಅಮ್ಮನ ಕೈಯಲ್ಲಿ, ಇನ್ನೊಂದು ಶಾಲೆಯಲ್ಲಿ ಮೇಸ್ಟ್ರ ಕೈಯಲ್ಲಿ. ಪುಳಿತ್ತಡರ್ ಹಿಡಿದ ಅಮ್ಮ ದುರ್ಗೆಯಂತೆ ಕಂಡರೆ, ನಾಗರಬೆತ್ತ ಹಿಡಿದ ಮೇಸ್ಟ್ರು ಸಾಕ್ಷಾತ್ ರುದ್ರ! ಅದರ ಮಹಿಮೆ ಮುಂದೆ ಮಕ್ಕಳ ಯಾವ ಮೊಂಡಾಡವೂ ಇಲ್ಲ, ಕೊಂಡಾಟವೂ ಇಲ್ಲ! ಗಪ್‌ಚುಪ್!

ನಮ್ಮ ಕಾಲದ ಶಿಕ್ಷಕರಿಗೆ ಶಿಕ್ಷೆ ಕೊಡುವುದಕ್ಕೆ ಒಂದು ನಿರ್ದಿಷ್ಟ ಕಾರಣ ಬೇಕೂಂತ ಇರಲಿಲ್ಲ. ಅಕ್ಷರ ವಕ್ರವಾದರೆ ಶಿಕ್ಷೆ, ಉಚ್ಚಾರ ತಪ್ಪಿದರೆ ಶಿಕ್ಷೆ, ಲೆಕ್ಕ ಬರದಿದ್ದರೆ ಶಿಕ್ಷೆ, ಉತ್ತರ ಹೇಳದಿದ್ರೆ ಶಿಕ್ಷೆ, ಜೋರು ಮಾತನಾಡಿದ್ರೆ ಶಿಕ್ಷೆ, ಮೌನವಾಗಿದ್ದರೂ ಶಿಕ್ಷೆ, ಹೋಂವರ್ಕ್ ಮಾಡದಿದ್ರೂ ಶಿಕ್ಷೆ, ನಕಲು ಮಾಡಿದ್ರೂ ಶಿಕ್ಷೆ, ಕಮ್ಮಿ ಮಾರ್ಕಿಗೆ ಶಿಕ್ಷೆ, ಹೀಗೆ ನಿಂತ್ರೂ ಶಿಕ್ಷೆ ಕೂತ್ರೂ ಶಿಕ್ಷೆ! ಒಟ್ರಾಸಿ ಶಿಕ್ಷೆ ಇಲ್ಲದೆ ಶಿಕ್ಷಣವಿಲ್ಲ! ತಪ್ಪಿಗೆ ತಕ್ಕಂತೆ ಕೊಡುವ ಶಿಕ್ಷೆಗಳಲ್ಲಿಯೂ ವೈವಿಧ್ಯತೆ ಇರುತ್ತಿತ್ತು. ಬೈಯುವುದು, ಹಂಗಿಸುವುದು, ಉಪದೇಶ ಮಾಡುವುದು; ಇದೆಲ್ಲ ನಮ್ಮ ಲೆಕ್ಕದಲ್ಲಿ ಶಿಕ್ಷೆಯೇ ಅಲ್ಲ. ಯಾಕೆಂದರೆ ದಪ್ಪ ಚರ್ಮದ ನಮಗೆ ಇದೆಲ್ಲ ನಾಟುತ್ತಿರಲಿಲ್ಲ. ಇನ್ನು ಕಿವಿ ಹಿಂಡುವುದು, ಬೆಂಚಿನಲ್ಲಿ ನಿಲ್ಲಿಸುವುದು, ಹೊರಗೆ ನಿಲ್ಲಿಸಿ ಬಿಸಿಲು ಕಾಯಿಸುವುದು, ಒಂಟಿಕಾಲಿನಲ್ಲಿ ನಿಲ್ಲಿಸುವುದು, ಕಪಾಲಮೋಕ್ಷ, ಬೆನ್ನಿಗೆ ಗುದ್ದು, ಅಡಿಕೋಲಿನಲ್ಲಿ ಪೆಟ್ಟು [ಇದಂತೂ ಸದ್ದು ಜೋರು, ನೋವು ಕಮ್ಮಿ] ಇದೆಲ್ಲ ಮಧ್ಯಮ ರೀತಿಯ ಶಿಕ್ಷೆಗಳು. ಆದರೆ ನಾಗರಬೆತ್ತದ ಪೆಟ್ಟಿನ ಶಿಕ್ಷೆ ಮಾತ್ರ ಭಯಂಕರ! ನಮ್ಮ ಶತ್ರುವಿಗೂ ಬೇಡ.

ನಾಗರಬೆತ್ತ ಅಂದ್ರೆ ಅದೇನು ಎ.ಕೆ.47 ಅಲ್ಲ. ಒಂದು ಸಾಮಾನ್ಯ ಬಿದಿರಿನ ಕಡ್ಡಿ! ಎರಡು ಅಡಿ ಉದ್ದದ, ಸಪೂರಕ್ಕೆ ಬಳುಕುವ ನಾಗರಬೆತ್ತ ನೋಡುವುದಕ್ಕೆ ಸಾಮಾನ್ಯ! ಬೀಸಿದರೆ ಮಾತ್ರ ಸ್ಯುಂಯಿ! ಎಂದು ಬುಸುಗುಟ್ಟುತ್ತದೆ. ಇದು ಮೇಸ್ಟ್ರ ಕೈಯಲ್ಲಿದ್ದಾಗ ಅವರ ಗತ್ತು ಗಾಂಭೀರ್ಯ ನೋಡಬೇಕು! ನಾಗರಬೆತ್ತವನ್ನು ಕೈಯಲ್ಲಿ ಧರಿಸಿದ ಮೇಸ್ಟ್ರು ನಮ್ಮ ಪಾಲಿಗೆ ಪ್ರಳಯ ಕಾಲದ ಮಹಾರುದ್ರ! ಕೆಲವರಂತೂ ಅದನ್ನು ಎಲ್ಲ ಕಡೆಗೆ ಕಂಕುಳದಲ್ಲಿ ಹೊತ್ತು ಓಡಾಡುತ್ತಿದ್ದರು, ಪೋಲೀಸರ ಕೈಯಲ್ಲಿ ಲಾಠಿ ಇದ್ದಂತೆ!

ಇನ್ನು ನಮ್ಮ ಶಾಲೆಗೆ ಬರೋಣ. ನಮ್ಮ ಶಾಲೆಯಲ್ಲಿ ಯಾವತ್ತೂ ಒಂದೂ ಪೆಟ್ಟು ತಿನ್ನದ ವಿದ್ಯಾರ್ಥಿ ಅಂದರೆ ಸತ್ಯನಾರಾಯಣ. ಅವನು ಮುಂದೆ ರ್‍ಯಾಂಕ್ ಪಡೆದು ಈಗ ಮಂಗಳೂರಿನಲ್ಲಿ ಪ್ರಸಿದ್ಧ ಡಾಕ್ಟರ್ ಆಗಿದ್ದಾನಂತೆ. ನಮ್ಮಲ್ಲಿ ದಿನವೂ ಪೆಟ್ಟು ತಿನ್ನುತ್ತಿದ್ದವನು ಅಂದರೆ ಐತಪ್ಪ. ಅವನು ಐದನೇ ಕ್ಲಾಸಿನಲ್ಲಿ ನನ್ನ ಅಣ್ಣನ ಸಹಪಾಠಿಯಾಗಿದ್ದ. ಆರರಲ್ಲಿ ನನ್ನೊಟ್ಟಿಗೆ, ಏಳರಲ್ಲಿ ತಮ್ಮನ ಜೊತೆಗೆ. ಒಂದೊಂದು ತರಗತಿಯಲ್ಲಿ ಕನಿಷ್ಠ ಎರಡೆರಡು ವರ್ಷ ಬೆಂಚು ಬಿಸಿ ಮಾಡಿದ್ದ! ಸ್ವಲ್ಪವೂ ವಿಚಲಿತನಾಗದೆ ನಾಗರಬೆತ್ತದಿಂದ ಪೆಟ್ಟು ತಿನ್ನುತ್ತಿದ್ದವನು ಅವನೊಬ್ಬನೇ! ನಮ್ಮ ಶಾಲೆಯಲ್ಲಿ ಬಹುಶಃ ಅತ್ಯಧಿಕ ಸಂಖ್ಯೆಯಲ್ಲಿ ನಾಗರಬೆತ್ತವನ್ನು ಮುರಿದ ಕೀರ್ತಿಯೂ ಅವನಿಗೆ ಸಲ್ಲುತ್ತದೆ. ನಾವು ಏನನ್ನಾದರೂ ಮರೆಯಬಹುದು. ಆದರೆ ನಾಗರಬೆತ್ತದಲ್ಲಿ ಪೆಟ್ಟು ತಿಂದಿದ್ದನ್ನಲ್ಲ!

ನಮ್ಮಲ್ಲಿ ಎಲ್ಲ ಶಿಕ್ಷಕರು ನಾಗರಬೆತ್ತದ ಪ್ರಯೋಗ ಮಾಡುತ್ತಿರಲಿಲ್ಲ. ಆದರೆ ಕೆಲವರು ಶಿಕ್ಷಣಕ್ಕಿಂತ ಹೆಚ್ಚು ಶಿಕ್ಷೆಗೆ ಮಹತ್ವ ಕೊಟ್ಟು ಶಿಕ್ಷಕ ಎನ್ನುವ ಅನ್ವರ್ಥನಾಮವನ್ನು ಪಡೆದವರಿದ್ದರು. ನಮ್ಮಲ್ಲಿ ಶಿಕ್ಷೆಗಾಗಿ ಖ್ಯಾತಿ [ಕುಖ್ಯಾತಿ?] ಪಡೆದವರು ಶಂಭ ಮಾಸ್ಟ್ರು. ಅವರು ನೋಡುವುದಕ್ಕೆ ಭೀಮನಂತೆ ದಷ್ಟಪುಷ್ಟವಾಗಿದ್ದರು. ಅದಕ್ಕೆ ಒಪ್ಪುವ ಅವರ ಕಂಚಿನ ಕಂಠ, ದೊಡ್ಡ ಕಣ್ಣುಗಳು. ಅವರು ಸದಾ ಶ್ವೇತ ವಸ್ತ್ರಧಾರಿಯಾದರೂ ಕಂಕುಳದಲ್ಲಿ ಮಾತ್ರ ನಾಗರಬೆತ್ತ! ಬಹುಶಃ ನಾವೆಲ್ಲ ನಾಗರಬೆತ್ತಕ್ಕೆ ಅಷ್ಟೊಂದು ಹೆದರುವುದಕ್ಕೆ ಶಂಭೂ ಮಾಸ್ಟರ್ ಕಾರಣ ಎಂದರೆ ಅತಿಶಯೋಕ್ತಿಯಲ್ಲ. ಯಾಕೆಂದರೆ

ಅವರ ಕೈಯಿಂದ ನಾಗರಬೆತ್ತದಲ್ಲಿ ಪೆಟ್ಟು ತಿನ್ನದೇ ಇದ್ದ ಗಂಡು ಮಕ್ಕಳು ವಿರಳಾತಿವಿರಳ. ವಿಶೇಷವೆಂದರೆ ಅವರು ಹೆಣ್ಣುಮಕ್ಕಳಿಗೆ ಬೈಯ್ಯುತ್ತಿದ್ದರೇ ವಿನಃ ಹೊಡೆದವರಲ್ಲ. ಹಾಗೆಂದು ಅವರಿಗೆ ಹೆದರದ ಒಬ್ಬನೇ ಒಬ್ಬ ವಿದ್ಯಾರ್ಥಿ ನಮ್ಮ ಶಾಲೆಯಲ್ಲಿರಲಿಲ್ಲ. ಅವರೇನಾದರೂ ತನ್ನ ಕ್ಲಾಸಿನಲ್ಲಿ "ಏಯ್! ಯಾರದು?" ಎಂದು ಗದರಿಸಿದರೆ ಸಾಕು, ಇಡೀ ಶಾಲೆಯ ಮೂವತ್ತೈದು ಕ್ಲಾಸ್‌ರೂಮುಗಳು ಒಮ್ಮೆಲೆ ನಿಶ್ಯಬ್ಧವಾಗುತಿತ್ತು. ಶಂಭು ಮಾಸ್ಟ್ರು ನಮ್ಮ ಶಾಲೆಯ ದುರ್ವಾಸ ಮುನಿಗಳು ಎಂದೇ ಪ್ರಸಿದ್ಧರಾಗಿದ್ದರು. ಅದನ್ನು ಅವರು ಕೂಡಾ ಭೂಷಣವೆಂದೇ ಭಾವಿಸಿದಂತಿತ್ತು. ಅದೇ ಕಾರಣಕ್ಕೆ ಇರಬೇಕು, ಅವರು ಯಾವಾಗಲೂ ಬೆತ್ತವನ್ನು ಹೊತ್ತು ಶಾಲೆಯ ಸುತ್ತ ಗಸ್ತು ತಿರುಗುತ್ತಿದ್ದರು. ಕೈಗೆ ಸಿಕ್ಕರೆ ಅಲ್ಲೇ ಡ್ರಾ, ಅಲ್ಲೇ ಬಹುಮಾನ! ವಿಚಾರಣೆ ಹಾಗೂ ಶಿಕ್ಷೆ ಒಟ್ಟೊಟ್ಟಿಗೆ! ಆದರೆ ಒಂದುಂಟು, ಅವರ ತರಗತಿಯಲ್ಲಿ ಫೈಲ್ ಆಗುವುದಕ್ಕೆ ಎಂಟೆದೆ ಬೇಕು. ಅವರ ಮೇಲಿನ ಭಯಕ್ಕೆ ಎಲ್ಲಾ ಕನಿಷ್ಠ ಪಾಸ್ ಆಗುವಷ್ಟು ಮಾರ್ಕು ಪಡೆಯುತ್ತಾರೆ! ಫೈಲ್ ಆದರೆ ಮತ್ತೊಂದು ವರ್ಷ ಅವರ ಬೆತ್ತದ ರುಚಿ ನೋಡಬೇಕಲ್ಲ! ಭಯ ಇದ್ರೆ ವಿದ್ಯೆ ತನ್ನಿಂದ ತಾನೆ ತಲೆಯೊಳಗೆ ಹೋಗುತ್ತದೆ ಎಂದು ಅವರು ಬಲವಾಗಿ ನಂಬಿದ್ದರು. ಅವರ ವಿಷಯದಲ್ಲಿ ಅದು ನಿಜವೂ ಹೌದು!

ನಾನು ಒಮ್ಮೆ ಅನ್ಯ ಕಾರಣಕ್ಕೆ ಅವರ ನಾಗರಬೆತ್ತದ ಪ್ರಯೋಗಕ್ಕೆ ಒಳಗಾಗಿದ್ದೆ. ಮೂವತ್ತೇಳು ವರ್ಷಗಳ ಹಿಂದೆ ನಾನು ಏಳನೇ ತರಗತಿಯಲ್ಲಿರುವಾಗ ನಮ್ಮ ಶಾಲೆಯಲ್ಲಿ ನಡೆದ ಆ ಒಂದು ಪ್ರಸಂಗ ನನಗೆ ಅವಿಸ್ಮರಣೀಯವಾಗಿದೆ. ನಮ್ಮದು ಕೇರಳ. ಆದರೆ ಕನ್ನಡದ ಶಾಲೆ. ಕಾರಣ ಗಡಿನಾಡು. ನಮ್ಮಲ್ಲಿ ಆಗೆಲ್ಲ ಮಧ್ಯಾಹ್ನದ ಹೊತ್ತು ಮಕ್ಕಳಿಗೆ ಸಜ್ಜಿಗೆ [ಉಪ್ಪಿಟ್ಟು] ವಿತರಿಸುತ್ತಿದ್ದರು. ಅದೂ ಒಂದರಿಂದ ಐದನೇ ಕ್ಲಾಸಿನ ಮಕ್ಕಳಿಗೆ ಮಾತ್ರ. ಮಿಕ್ಕಿ ಉಳಿದರೆ ಆರರಿಂದ ಏಳರ ಕ್ಲಾಸಿನ ಮಕ್ಕಳಿಗೆ ಸಿಗುತ್ತಿತ್ತು. ಆದರೂ ಸಜ್ಜಿಗೆ ತಿನ್ನಲು ನಾವು ಹಪಹಪಿಸುತ್ತಿದ್ದೆವು. ಹಾಗಾಗಿ ಮಕ್ಕಳ ಸಾಲಿನ ಕೊನೆಯಲ್ಲಿ ಆರು ಮತ್ತೆ ಏಳನೇ ತರಗತಿಯ ಮಕ್ಕಳು ಸಜ್ಜಿಗೆಯ ನಿರೀಕ್ಷೆಯಲ್ಲಿ ಕಾಯುತ್ತಿದ್ದೆವು. ಸಿಕ್ಕರೆ ಅದೇ ಮಹಾಭಾಗ್ಯ. ಚಿಕ್ಕ ಮಕ್ಕಳು ಶಾಲೆಗೆ ಬರುವಾಗ ಸಜ್ಜಿಗೆಗೆ ತಟ್ಟೆ, ಬಟ್ಟಲು ತರುವುದು ಸಾಮಾನ್ಯ. ಆದರೆ ನಾವು ನಮ್ಮ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ಉಪ್ಪಳಿಗೆ [ಕಂಚುಪ್ರಾಂತಿ /ಬಟ್ಟಚಂದ್ರಿಕೆ] ಮರದ ಎಲೆಗಳಲ್ಲಿ ಸಜ್ಜಿಗೆ ಹಾಕಿಸಿಕೊಳ್ಳುತ್ತಿದ್ದೆವು. ಆ ಎಲೆಗಳು ಬಟ್ಟಲಿನಷ್ಟೇ ದೊಡ್ಡದಿರುತ್ತಿತ್ತು. ಯೂಸ್ ಆಂಡ್ ಥ್ರೋ!

ನಾನು ಬಾಲ್ಯದಿಂದಲೂ ಮರ ಹತ್ತುವುದರಲ್ಲಿ ಭಯಂಕರ ಚುರುಕು. ಅಂದು ಮಧ್ಯಾಹ್ನ ನಾನು ಶಾಲೆ ವಠಾರದ ಹಿಂದಿದ್ದ ಸುಮಾರು ಹತ್ತಡಿ ಎತ್ತರದ ಉಪ್ಪಳಿಗೆ ಮರವೊಂದಕ್ಕೆ ಹತ್ತಿ ಸಜ್ಜಿಗೆಗಾಗಿ ಎಲೆಗಳನ್ನು ಕೀಳುತ್ತಿದ್ದೆ. ನನ್ನ ಸಹಪಾಠಿಗಳು ಕೆಳಗೆ ನಿಂತು ತುಳುವಿನಲ್ಲಿ "ಎಂಕೊಂಜಿ, ಎಂಕೊಂಜಿ" [ನಂಗೊಂದು, ನಂಗೊಂದು] ಎಂದು ಬೊಬ್ಬೆ ಹೊಡೆಯುತ್ತಿದ್ದರು. ನಮ್ಮ ಬೊಬ್ಬೆ ಕೇಳಿದ ಶಂಭು ಮಾಸ್ಟ್ರು ಅಲ್ಲಿಗೆ ಧಾವಿಸಿದರು "ತೆಕ್ಕೋ, ನಿಂಗೊಂದು, ನಿಂಗೊಂದು" ಎಂದು ತನ್ನ ನಾಗರಬೆತ್ತ ಬೀಸಿದರು. ಕೆಲವು ಮಕ್ಕಳ ಬೆನ್ನಿಗೆ ಬಿತ್ತು. ಎಲ್ಲರೂ ಭಯಭೀತಿಯಿಂದ ಅಲ್ಲಿಂದ ಕಾಲ್ಕಿತ್ತರು. ಮರದ ಮೇಲಿದ್ದ ನಾನು ನಖಶಿಖಾಂತವಾಗಿ ನಡುಗುತ್ತಿದ್ದೆ. "ಮಂಗ, ಇಳಿಯ ಕೆಳಗೆ. ನಿನ್ನ ಬೆನ್ನಿನ ಚರ್ಮ ಸುಲಿಯುತ್ತೇನೆ!" ಎಂದು ಮಾಸ್ಟ್ರು ನನಗೆ ದಬಾಯಿಸಿದರು. ನಾನು ಅಲ್ಲಿಂದಲೇ "ದಮ್ಮಯ್ಯ ಮಾಸ್ಟ್ರೇ, ನಾನು ಎಂತದ್ದು ತಪ್ಪು ಮಾಡ್ಲಿಲ್ಲ. ನಂಗೆ ಹೊಡಿಯಬೇಡಿ..." ಎನ್ನುತ್ತಾ ಭಯದಿಂದ ಅಷ್ಟು ಎತ್ತರದಿಂದ ಕೆಳಕ್ಕೆ ಧುಮಿಕಿದೆ. ಬಿದ್ದ ರಭಸಕ್ಕೆ ಕಾಲು ತಿರುಚಿಕೊಂಡು ಬಿಟ್ಟಿತು. ಚಡ್ಡಿ ಒದ್ದೆಯಾಯಿತು!

"ಮಂಗ, ಮರ ಹತ್ತುತ್ತಾನೆ!" ಎಂದು ನಾಗರಬೆತ್ತ ಬೀಸಿದರು.

ನಾನು ಬಿದ್ದು ಏಳುವಷ್ಟರಲ್ಲಿ ಎರಡು-ಮೂರು ಬಿತ್ತು! ನಾನು ಜೀವನದಲ್ಲಿ ಮೊದಲ ಬಾರಿ ಅಷ್ಟೊಂದು ತೀವ್ರವಾಗಿ ನಾಗರಬೆತ್ತದ ರುಚಿ ಕಂಡಿದ್ದು. ಯಬ್ಬಾ ನೋವೇ! ಬೆನ್ನು ಒಡೆಯಿತು. ಜೀವ ಉಳಿಸಿಕೊಳ್ಳಲು ಕುಂಟುತ್ತಾ ಓಡಿ ತಪ್ಪಿಸಿಕೊಂಡೆ. ರಪರಪನೆ ಬಿದ್ದ ನಾಗರಬೆತ್ತದ ಪೆಟ್ಟಿನ ಜೊತೆಗೆ ಕಾಲು ತಿರುಚಿದ್ದರಿಂದ ನಂಗೆ ಎರಡು ದಿವಸ ಜ್ವರ ಬಂದಿತ್ತು. ಮೂರನೆಯ ದಿವಸ ಅಂಜುತ್ತ ಶಾಲೆಗೆ ಬಂದೆ. ಮೂರನೇ ಪೀರಿಯೆಡ್‌ಗೆ ಶಂಭ ಮೇಸ್ಟ್ರು ಬಂದಾಗ ನಾನು ಭಯದಿಂದ ನಡುಗುತ್ತಿದ್ದೆ. ಆದರೆ ಅವರು ನನ್ನ ಹತ್ತಿರ ಬಂದು "ರಮೇಶ, ನಿನ್ನ ಕಾಲು ನೋವು ಹೇಗೆ ಉಂಟ?" ಎಂದು ಕನಿಕರದಿಂದ ಕೇಳಿದಾಗ ನಂಗೆ ನೋವು ಮಾಯವಾಗಿತ್ತು.

ಇತ್ತೀಚೆಗೆ ಅದೇ ಶಂಭು ಮಾಸ್ಟ್ರು ಗುರುಗಳು ನಾನು ಕಥೆ-ಚಿತ್ರಕತೆ ಬರೆದ ತುಳು ಚಿತ್ರ "ಪಿದಾಯಿ" ಇದರ ಪ್ರೀಮಿಯರ್ ಶೋಗೆ ಮಂಗಳೂರಿಗೆ ಕುಟುಂಬ ಸಮೇತ ಬಂದಿದ್ದರು. ಈಗ ಅವರು ನಿವೃತ್ತರಾಗಿ ಹನ್ನೆರಡು ವರ್ಷವಾಗಿದೆ. ಪಿದಾಯಿ ಚಿತ್ರದಲ್ಲಿ ನಿರ್ದೇಶಕರು ಹಾಗೂ ನನ್ನನ್ನು ಸೇರಿಸಿ ಒಟ್ಟು ಎಂಟು ಮಂದಿ ಶಿಷ್ಯರಿದ್ದೇವೆ. ಚಿತ್ರವನ್ನು ನೋಡಿ ಬಹಳ ಹೆಮ್ಮೆಯಿಂದ ನನ್ನ ಬೆನ್ನು ತಟ್ಟಿ ಹೊಗಳಿದರು. ಮಾತಿನ ಮಧ್ಯೆ ನಗುತ್ತಾ ನಾನು ಅವರಿಗೆ ನಾಗರಬೆತ್ತದ ಪ್ರಸಂಗವನ್ನು ಹೇಳಿದೆ. ಆದರೆ ಪಾಪ, ಅವರು ಸಂಕೋಚಪಟ್ಟರು. ಈಗೆಲ್ಲ ಮಕ್ಕಳಿಗೆ ಹೊಡೆಯುವುದು ಬಿಡಿ, ಜೋರು ಮಾಡಿದ್ರೂ ಪೋಷಕರಿಂದ ಕಂಪ್ಲೈಂಟ್ ಬರುತ್ತದೆ, ಎಂದರು ಗುರುವರ್ಯರು. ಈಗ ಏನಾದರೂ ನಾಗರಬೆತ್ತ ಕೈಯಲ್ಲಿ ಹಿಡಿದರೆ ಅಧ್ಯಾಪಕರು ಜೈಲಿಗೆ ಹೋಗಬೇಕಾಗುತ್ತದೆ ಎಂದರು.



ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ಸುಂದರ್‌ರಾಮ್ ಶೆಟ್ಟಿ ನಗರ,
ಬೆಂಗಳೂರು



ಕವಿತಾವಾಣಿ

# ಪಯಣ

ಧರೆಯಲ್ಲಿ ಜನಿಸಿದಾಗ ಸಾಗಿತು ಜೀವನ ಪಯಣ ....
ಬಾಲ್ಯದಿ ಕಳೆಯಿತು ಜವಾಬ್ದಾರಿ ಇಲ್ಲದ ಆಟದ ವಿಧಾನ.......
ಹರೆಯದಿ ಕನಸಿನ ಲೋಕದಿ ಪ್ರೀತಿಯ ಚರಣ......
ಮೈಮರೆಯುವ ಪುಳಕಿತ ಮನದ ನನಸಿನ ನಯನ.....

ಜೀವನ ಸಾಗಲಿ ಸಂತಸದಿ ಹೀಗೆಯೇ ನಿಧಾನ.....
ಸಂಸಾರ ಸಾಗರದಿ ಸಾಮರಸ್ಯದಿ ಇರದಿರಲಿ ಕದನ.....
ಜೀವನ ಪಥದಲಿ ಸಹಕಾರ ಸಹನೆಯ ತಾಣ.....
ಸಾಗುವ ಬದುಕಿನ ಪಯಣದಲಿ ಧನ್ಯತೆಯೇ ಪ್ರಧಾನ.....
ಪಯಣದ ಅಂತ್ಯದಿ ಕಾದಿದೆ ಮರಣವೆಂಬ ಪಯಣ. . . . .



ಅನುರಾಧ ಉದಯ್
ಉಡುಪಿ

# ಸಂಪಾದಕ ವಾಣಿ



## ನಾರಾಯಣ ಶೆಟ್ಟಿಗಾರ್

ದಿನಾಂಕ 07.07.2024ರಂದು ಶ್ರೀ ಸತ್ಯನಾರಾಯಣ ಸ್ವಾಮಿಯ ಅನುಗ್ರಹದೊಂದಿಗೆ ಶೆಟ್ಟಿಗಾರವಾಣಿಯ ಪ್ರಥಮ ಸಂಚಿಕೆ ಬೆಳಕು ಕಂಡಿತು. ಇಂದು ನಮ್ಮ ನಿಮ್ಮೆಲ್ಲರ ಈ ಪತ್ರಿಕೆ ಊಹೆಗೂ ಮೀರಿದ ಯಶಸ್ಸಿನೊಂದಿಗೆ ಬೆಳೆದು ನಿಂತು ನಮ್ಮೆಲ್ಲರನ್ನೂ ರಂಜಿಸುತ್ತಿದೆ. ಇದಕ್ಕೆ ಕಾರಣರಾದವರು ತಮ್ಮಂತಹ ಓದುಗರು. ಓದುಗರಷ್ಟೇ ಮುಖ್ಯ ಕಾರಣರಾದವರು ನಮ್ಮ ಹಿರಿಯ ಹಾಗೂ ಕಿರಿಯ ಸಾಹಿತ್ಯ ಬ್ರಹ್ಮರು ಎನ್ನುವುದನ್ನು ಮರೆಯಲಾಗದು.

ಪತ್ರಿಕೆಯ ಮೌಲ್ಯವರ್ಧನೆಗೆ ಮೌಲ್ಯಾಧಾರಿತ ಬರವಣಿಗೆಗಳಷ್ಟೇ ಮುಖ್ಯ ಯಶಸ್ವೀ ವಿನ್ಯಾಸದ ಮೆರುಗು ಎನ್ನುವುದು ಬಹಿರಂಗ ಸತ್ಯ.

ಈ ಸಂಚಿಕೆ ಎಂದರೆ ಜೂನ್ 2025ರ ಸಂಚಿಕೆ ನಮ್ಮ ಹೆಮ್ಮೆಯ ಸಂಚಿಕೆ. ಈ ನಮ್ಮ ಪತ್ರಿಕೆಯ ಪ್ರಥಮ ಸಂಪುಟದ ಹನ್ನೆರಡನೆಯ ಸಂಚಿಕೆ, ಪತ್ರಿಕೆಯ ಪ್ರಕಟಣೆಯ ಒಂದು ವರ್ಷವನ್ನು ಪೂರ್ಣಗೊಳಿಸುವ ಅವಿಸ್ಮರಣೀಯ ಮೈಲಿಗಲ್ಲು.

ಒಂದು ವರ್ಷ ಪೂರ್ತಿ ತಮ್ಮ ಸೃಜನಶೀಲ ಬರವಣಿಗೆಗಳಿಂದ ಸಹಕರಿಸಿದ ನಮ್ಮೆಲ್ಲಾ ಲೇಖಕ ಬಳಗದವರಿಗೆ ನಮ್ಮ ಕೃತಜ್ಞತೆಗಳು. ಮುಂದೆಯೂ ತಮ್ಮ ಸಹಕಾರ ನಮಗಿರಲಿ.

ಹೆಚ್ಚು ಹೆಚ್ಚು ಹೊಸ ಪ್ರತಿಭೆಗಳು ಪ್ರಕಟಗೊಳ್ಳಬೇಕು, ಪತ್ರಿಕೆಯ ಸದುಪಯೋಗ ಪಡೆದುಕೊಳ್ಳಬೇಕು ಎನ್ನುವುದು ನಮ್ಮ ಬಯಕೆ. ಅಂತೆಯೇ ಹೊಸ ಹೊಸ ಪ್ರತಿಭೆಗಳು ಕಾಣಿಸಿಕೊಳ್ಳುತ್ತಿರುವುದು ಸಂತಸದ ವಿಷಯ.

ಮುಖ್ಯವಾಗಿ ನಮ್ಮ ನೆಚ್ಚಿನ ಓದುಗ ಬಳಗಕ್ಕೆ ನಾವು ಆಭಾರಿಯಾಗಿದ್ದೇವೆ. ನಿಮ್ಮ ಲಿಖಿತ ಪ್ರತಿಕ್ರಿಯೆಗಳು ನಮ್ಮ ಉತ್ಸಾಹಕ್ಕೆ ವೇಗವರ್ಧಕ.




# ಹೆತ್ತವರು

ಹೆತ್ತವರು ಮಕ್ಕಳನ್ನು ಹೆತ್ತರಷ್ಟೇ ಆಯಿತೇ? ಪ್ರತೀ ಮಗುವಿಗೂ ಉತ್ತಮ ಸಂಸ್ಕಾರವನ್ನು ಕೊಡಬೇಕಲ್ಲವೇ? ಜೀವನದ ಮೌಲ್ಯಗಳನ್ನು ತಿಳಿಸಬೇಕಲ್ಲವೇ? ತನ್ನ ಮನೆ, ತನ್ನ ಮನೆ ಮಂದಿಯ ಸಾಮೀಪ್ಯ, ಹಿತ ವಚನದ ಬೋಧನೆ, ಆಡುವ ಮಾತಿನ ಹಿಡಿತ, ಹಾಸ್ಯ ಪ್ರಜ್ಞೆಯ ಅನುಭವ, ತನ್ನ ಪರಿಸರದ ವಿಚಾರ ಇತ್ಯಾದಿಗಳನ್ನು ಮಗು ತನ್ನಿಂತಾನೇ ಪಡೆಯುವಂಥಾ ವಾತಾವರಣವನ್ನು ನಿರ್ಮಿಸುವುದು ಹಾಗೂ ತಿಳಿಯ ಪಡಿಸುವುದು ಪ್ರತೀ ಹೆತ್ತವರ ಆದ್ಯ ಕರ್ತವ್ಯ. ಮಗು ಒಂದೇ ಇರಲಿ ಅಥವಾ ಎರಡು. ಅವರನ್ನು ಪಡೆದಿರುವುದು ದೇವರು ನಮಗೆ ಕೊಟ್ಟಿರುವ ವರ ಪ್ರಸಾದ. ಇವರನ್ನು ಚೆನ್ನಾಗಿ ಸಾಕಿ ಸಲಹುವುದೂ ಹೆತ್ತವರ ಕರ್ತವ್ಯ. ಒಳ್ಳೆಯ ವಿದ್ಯೆಯನ್ನಿತ್ತು ಉತ್ತಮ ಪ್ರಜೆಗಳನ್ನಾಗಿ ಮಾಡುವುದೂ ಕೂಡಾ ಪ್ರತಿಯೊಬ್ಬ ತಂದೆ ತಾಯಿಯ ಆದ್ಯ ಕರ್ತವ್ಯ. ಇವತ್ತು ನಮ್ಮ ಸರಕಾರ ವಿದ್ಯಾರ್ಜನೆಗೆ ಬಹಳ ಒತ್ತನ್ನಿತ್ತು ಬೇಕಾದ ಎಲ್ಲಾ ಸವಲತ್ತುಗಳನ್ನೂ ಒದಗಿಸುತ್ತಾ ಬಂದಿದೆ. ಅದೇ ಒಂದೆರಡು ದಶಕಗಳ ಹಿಂದಿಗಿಂತ ಇಂದು ಎಲ್ಲಾ ತರದ ಸೌಕರ್ಯಗಳಿಗೂ ಅವಕಾಶವಿದೆ. ಇವೆಲ್ಲಾ ಅವಕಾಶಗಳನ್ನು ಸದ್ವಿನಿಯೋಗ ಪಡಿಸಿಕೊಂಡು ಮಗುವಿನ ಆಸಕ್ತಿಗಳಿಗನುಸಾರವಾಗಿ ಸರಿಯಾದ ವಿದ್ಯೆಯನ್ನು ಕೊಡ ಮಾಡುವುದು ಹೆತ್ತವರ ಪಾಲಿಗೆ ಬಿಟ್ಟಿದೆ. ಬೆಳೆಯ ಸಿರಿ ಮೊಳಕೆಯಲ್ಲೇ ಅಂತಾರೆ. ಈ ರೀತಿ ಮಕ್ಕಳಲ್ಲಿರುವ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಲಭ್ಯವಿರುವ ಎಲ್ಲಾ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಮಕ್ಕಳು ಈ ದಿಸೆಯಲ್ಲಿ ಮುಂದುವರಿಯುವಂತೆ ಮಾಡುವುದು ಎಲ್ಲಾ ತಂದೆ ತಾಯಿಯ ಆಧ್ಯ ಕರ್ತವ್ಯ ವಾಗಿರುತ್ತದೆ. ಮಕ್ಕಳನ್ನು ಅವರ ಪಾಡಿಗಷ್ಟೇ ಬಿಡದೆ ಅವರಿಗೆ ಅಲ್ಲಲ್ಲಿ ಸಲಹೆ ಸೂಚನೆಗಳನ್ನು ಕೊಡುವುದೂ ಕೂಡ ಹೆತ್ತವರ ಕರ್ತವ್ಯ. ತಮ್ಮ ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳ ಕಡೆಗೆ ತಮ್ಮ ಗಮನವನ್ನೀಯುವುದಲ್ಲದೆ ಈ ವಿಷಯಗಳನ್ನು ಮಕ್ಕಳಿಗೂ ತಿಳಿಯ ಪಡಿಸಿ ಅವರ ಗಮನವನ್ನು ಸೆಳೆಯುವುದು ಕೂಡ ಪ್ರತೀ ತಂದೆ ತಾಯಿಯ ದಿನಚರಿಯಾಗಿರಬೇಕು. ಇದು ನಿರಂತರವಾಗಿ ನಡೆಯುತ್ತಿರುವ ಒಂದು ಪ್ರಕ್ರಿಯೆಯೂ ಆಗಿರಬೇಕು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಉತ್ತಮ ಪಂಕ್ತಿಯಲ್ಲಿ ನಡೆಸಿದಾಗ ಇವರೆಲ್ಲ ನಮ್ಮ ನಾಡನ್ನು ನಾಳೆ ಉತ್ತಮವಾಗಿ ನಡೆಸಿಕೊಂಡು ಹೋಗುವುದರಲ್ಲಿ ಅನುಮಾನವೇ ಇಲ್ಲ.



**ಮಾಧವ ಶೆಟ್ಟಿಗಾರ್, ಯು**
**ವಿಜಯನಗರ, ಬೆಂಗಳೂರು**



ಕವಿತಾವಾಣಿ

# ನಾನು ದೇವರನ್ನು ಕಂಡೆ

ನಿನ್ನೆ ರಾತ್ರಿ ದೇವಸ್ಥಾನದ
ಹೊರಗೆ ಅವನು ಬಂದು ನಿಂತಿದ್ದ.
ಬಿಳಿ ಉದ್ದದ ತಲೆಗೂದಲು.
ಬಿಳಿ ಕುರುಚಲು ಗಡ್ಡ.
ಸುಕ್ಕುಗಟ್ಟಿ, ಜೋತು ಬಿದ್ದ ಚರ್ಮ.
ಕಡಿಮೆ ಮಾಂಸದಲಿ ಎದ್ದು
ಕಾಣುವ ಬಿಳಿ ಮೂಳೆಗಳು.
ಬಗಲಲ್ಲೊಂದು ಜೋತು ಬಿದ್ದ ಚೀಲ.
ಆಧಾರಕ್ಕೊಂದು ಊರುಗೋಲು.
ಮಾಸಿದ ಅಂಗಿಗೆ ಹರಿದ ಲುಂಗಿ.
ಕಣ್ಣುಗಳು ಕಾಣುತ್ತದೋ ಗೊತ್ತಿಲ್ಲ.
ಆಗಾಗ ಕಣ್ಣುಗಳನ್ನು ಮಿಣಿಕಿಸುತ್ತಿದ್ದ.
ಬರಿಗಾಲಲ್ಲಿ ನಿಂತಿದ್ದ ಫಕೀರ.
ಒಂದು ಎರಡು ರೂಪಾಯಿ
ನೀಡಿದರೂ ನಿರಾಕರಿಸಿದ.
ಯಾಕೆಂದು ಕೇಳಿದೆ.
ನನಗೆ ನಾಣ್ಯಗಳು ಬೇಡ.
ಹೊಟ್ಟೆ ಹಸಿದಿದೆ.ಅನ್ನಕ್ಕಾಗಿ ನಿಂತೆ!
ನೀನು ಹಸಿವು ನೀಗಿಸುವೆಯಾ?
ನೀನು ಬರುವುದಾದರೆ ಖಂಡಿತಾ. .!!
ಪಕ್ಕದಲ್ಲಿಯೇ ನನ್ನ ಮನೆಯಿತ್ತು.
ಹೊಟ್ಟೆ ತುಂಬಾ ಊಟ
ಮಾಡಿ ತೇಗಿದ.
ಇನ್ನು ನೋಡ ಬಯಸಿದರೆ ನೀ
ನನ್ನನ್ನು, ಅನ್ನದ ರೂಪದಲಿ ಕಾಣು.
ಹರಸಿ ಹೋದ ಆ ದೇವರು.. !!



**ಜಗದೀಶರಾಂ ಶೆಟ್ಟಿಗಾರ್ ಜಪ್ತಿ**
**ಕುಂದಾಪುರ**

# ಕೃಷ್ಣನ ಕೊಳಲಿನ ಕರೆ



AI generated image: No photo credits required

ಕೃಷ್ಣನ ಕೊಳಲಿನ ಕರೆ. ಬಿದಿರಿನ ಕೊರಳಿನ ಕರೆ. ಕೊಳಲಿನ ಕರೆಗೆ ಕರಗಿದಳು ರಾಧೆ.

ಕೃಷ್ಣನಿಲ್ಲದ ರಾಧೆ, ರಾಧೆಯಿಲ್ಲದ ಕೃಷ್ಣ; ಊಹಿಸಲೂ ಸಾಧ್ಯವಿಲ್ಲ.

ಕೃಷ್ಣ ರಾಧೆಯರ ಪ್ರೇಮ ವರ್ಣನಾತೀತ. ರಾಧಾಕೃಷ್ಣರನ್ನು ದೂರ ದೂರ ಮಾಡುವುದು ಎಂದೂ ಸಾಧ್ಯವಿಲ್ಲ. ಆದರೂ ರಾಧಾಕೃಷ್ಣರ ವಿವಾಹ ಬಂಧನವೂ ಆಗಲಿಲ್ಲ.

ಕೃಷ್ಣನ ಮುರಳಿಯ ನಾದ ಕೇಳಿದಾಗಲೆಲ್ಲಾ ರಾಧೆ ಮೈಮರೆತು ಕುಣಿಯಲು ಪ್ರಾರಂಭಿಸುತ್ತಿದ್ದಳು. ಅವಳು ಒಬ್ಬಳೇ ಇರಬೇಕೆಂದೇನೂ ಇರಲಿಲ್ಲ. ಗೋಪಿಯರ ಮಧ್ಯದಲ್ಲಿ ಇರುವಾಗಲೂ ಕೊಳಲಿನ ದನಿಗೆ ಹೆಜ್ಜೆಯಾಗುತ್ತಿದ್ದಳು.

ಕೃಷ್ಣನಿಗೆ ಹದಿನಾರು ಸಾವಿರದ ನೂರೆಂಟು ಮಂದಿ ಪತ್ನಿಯರು. ಅದರಲ್ಲಿ ಎಂಟು ಮಂದಿ ಅಷ್ಟಮಹಿಷಿಯರು – ರುಕ್ಮಿಣಿ, ಸತ್ಯಭಾಮೆ, ನೀಲೆ, ಮಿತ್ರವೃಂದೆ, ಜಾಂಬವತಿ, ಭದ್ರೆ, ಲಕ್ಷಣೆ ಮತ್ತು ಕಾಳಿಂದಿ. ಶ್ರೀರಾಮ ಸೀತಾರಾಮನಾದಂತೆ ಶ್ರೀಕೃಷ್ಣನೂ ರಾಧಾಕೃಷ್ಣನಾದ. ಆದರೆ ಕೃಷ್ಣನ ಹೆಸರಿನ ಹಿಂದೆ ಉಳಿದ ಪತ್ನಿಯರ ಹೆಸರು ಕಾಣಿಸಲಿಲ್ಲ. ಅಷ್ಟಮಹಿಷಿಯರಿಗೂ ಆ ಭಾಗ್ಯ ದೊರಕಲಿಲ್ಲ. ಮದುವೆಯೇ ಆಗದಿದ್ದರೂ ಮದುವೆಯಾದ ಪತ್ನಿಯರಿಗಿಂತಲೂ ಹೆಚ್ಚಿನ ಭಾಗ್ಯ ರಾಧೆಯ ಪಾಲಿಗೆ ಬಂದಿತು. ಶ್ರೀಕೃಷ್ಣನ ತಲೆಯಲ್ಲಿ ಮೆರೆಯುವ ನವಿಲುಗರಿ ಮತ್ತು ಕೊರಳಲ್ಲಿ ಧರಿಸುವ ವೈಜಯಂತಿಮಾಲೆಗಳು ರಾಧೆ ತನ್ನ ಪ್ರೀತಿಯ ಕುರುಹಾಗಿ ಕೃಷ್ಣನಿಗೆ ಕೊಟ್ಟ ಉಡುಗೊರೆಗಳು.

ವಯಸ್ಸಿನಲ್ಲಿ ರಾಧೆ ಹಿರಿಯಳಾದರೂ ರಾಧಾಕೃಷ್ಣರ ಪ್ರೇಮಗಾಥೆಗೆ ಚ್ಯುತಿ ಬರಲಿಲ್ಲ. ಕೃಷ್ಣ ರಾಧೆಯರು ಬಾಲ್ಯ ಸ್ನೇಹಿತರು. ವೃಂದಾವನದಲ್ಲಿ ಗೋಪಿಕೆಯರೊಂದಿಗೆ ಇರುವಾಗ ಮುರಳೀಧರನ ಮುರಳಿಯ ಗಾಯನಕ್ಕೆ ರಾಧೆಯ ನರ್ತನ ಸಾಮಾನ್ಯವಾಗಿತ್ತು. ಕೃಷ್ಣ ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ವೃಂದಾವನವನ್ನು ಬಿಟ್ಟು ಮಧುರೆಗೆ ಹೊರಡಬೇಕಾದ ಸನ್ನಿವೇಶ ಒದಗಿ ಬಂತು. "ಪೋಗುವುದುಚಿತವೆ ಮಾಧವ ಮಧುರೆಗೆ ಬಾಗುವೆ ಎಲೋ ನಿನಗೆ. ನಾಗಶಯನ ನಿನ್ನನಗಲಿ ಒಂದು ಕ್ಷಣ ಹೇಗೆ ಸೈರಿಸುವೆವೊ ಆಗಮನುತ ಕೃಷ್ಣ" ಎಂದು ಗೋಗರೆಯುವ ಗೋಪಿಕಾಸ್ತ್ರೀಯರಿಗೆ ಸಾಂತ್ವನ ಹೇಳುತ್ತಾ, ಆದಷ್ಟು ಬೇಗನೆ ಹಿಂದಿರುಗಿ ಬಂದು ನಿಮ್ಮನ್ನು ಸೇರಿಕೊಳ್ಳುತ್ತೇನೆ ಎಂದು ಭರವಸೆ ಕೊಟ್ಟು ತನ್ನ ಜವಾಬ್ದಾರಿ ನಿರ್ವಹಣೆಗೆ ಕೃಷ್ಣ ತೆರಳಿದ.

ಒಂದು ಕಥೆಯ ಪ್ರಕಾರ ರಾಧೆ ಹಿಂದಿನ ಜನ್ಮದಲ್ಲಿ ಸುಗುಣೆ ಎಂಬ ಹೆಸರಿನಲ್ಲಿ ಶ್ರೀರಾಮನ ದಾಸಿಯಾಗಿದ್ದಳಂತೆ. ಆಗ ಶ್ರೀರಾಮನ ಬಾಯ್ದಂಬುಲಕ್ಕೆ ಕೈನೀಡಿದ ಸುಗುಣೆಯನ್ನು ಮೆಚ್ಚಿದ ರಾಮ ವರ ಕೊಡಲು ಮುಂದಾದನಂತೆ. ಆಗ ಆಕೆ ರಾಮನ ಅಂಗಸುಖವನ್ನು ಬಯಸಿದಳಂತೆ. ಶ್ರೀರಾಮ ಅವಳಿಗೆ "ನೀನು ಮುಂದಿನ ಜನ್ಮದಲ್ಲಿ ರಾಧೆಯಾಗಿ ಹುಟ್ಟು. ನಾನು ಕೃಷ್ಣನಾಗಿ ಹುಟ್ಟಿ ಬಂದು ನಿನ್ನ ಮನದಾಸೆಯನ್ನು ತೀರಿಸುತ್ತೇನೆ" ಎಂದು ವಚನವಿತ್ತನಂತೆ.

ರಾಧೆ ಶ್ರೀಕೃಷ್ಣನನ್ನು ಕೊನೆಯದಾಗಿ ನೋಡಲು ದ್ವಾರಕೆಗೆ ಹೋದಳು. ಕೃಷ್ಣನಿಂದ ದೂರವಾಗಿದ್ದ ರಾಧೆ ಕೃಶಾಂಗಿಯಾಗಿ ಅತ್ಯಂತ ದುರ್ಬಲ ಸ್ಥಿತಿಯಲ್ಲಿದ್ದಳು. ಅವಳನ್ನು ನೋಡಿದ ಕೃಷ್ಣನಿಗೆ ತಡೆಯಲಾಗಲಿಲ್ಲ. "ರಾಧಾ, ಓ ರಾಧಾ, ನೀನೇಕೆ ಹೀಗಾಗಿರುವಿ? ನಿನಗೇನಾಯಿತು?" ಎಂದು ಪ್ರಲಾಪಿಸಿದ. ರಾಧೆ ಮಾತ್ರ "ಹೇ ಪ್ರಭು, ನನಗೇನಾಗಿದೆ? ಏನೂ ಆಗಿಲ್ಲ. ಚೆನ್ನಾಗಿಯೇ ಇದ್ದೇನೆ" ಎನ್ನುತ್ತಾ "ವೇಣುಗೋಪಾಲ, ನಿನ್ನ ಮುರಳಿಯ ಮನೋಹರ ಗಾಯನವನ್ನು ಆಸ್ವಾದಿಸುವ ಆಸೆ ನನಗೆ. ನನ್ನಾಸೆ ತೀರಿಸುವೆಯಾ?" ಎಂದು ವಿನೀತೆಯಾಗಿ ಬೇಡಿದಳು. ರಾಧೆಯ ಬೇಡಿಕೆಯನ್ನು ರಾಧಾಕೃಷ್ಣ ತಳ್ಳಿ ಹಾಕಲಿಲ್ಲ. ರಾಧೆ ಕೃಷ್ಣನ ಕೊಳಲಿನ ಕರೆಯನ್ನು ಆಲಿಸಿದಳು; ಆಸ್ವಾದಿಸಿದಳು. ಅವನ ಮುರಳಿಯ ನಾದದಲ್ಲಿ ತಲ್ಲೀನಳಾಗಿ ಹೋದಳು. ಕೃಷ್ಣನ ಎದೆಯ ಮೇಲೆ ತನ್ನ ತಲೆಯನ್ನು ಒರಗಿಸಿದಳು. ಅದೆಷ್ಟು ಹೊತ್ತು ಕಳೆಯಿತೋ ತಿಳಿಯದು. ಕೃಷ್ಣ ಮೆಲ್ಲನೆ ಪಿಸುಗುಟ್ಟಿದ: "ರಾಧಾ, ಏಳು, ಎದ್ದೇಳು." ರಾಧಾ ಮಿಸುಕಾಡಲಿಲ್ಲ. ಕೃಷ್ಣ ಅವಳ ತಲೆಯನ್ನು ಅಲುಗಾಡಿಸಿದ. ಅಲ್ಲ, ರಾಧಾ ತಲ್ಲೀನಳಲ್ಲ. ಕೃಷ್ಣನಲ್ಲೇ ಲೀನವಾಗಿ ಹೋಗಿದ್ದಳು. ಕೃಷ್ಣನಿಗೆ ತನ್ನ ರಾಧಾ ಇನ್ನಿಲ್ಲವೆನ್ನುವ ಕಟುಸತ್ಯದ ಅರಿವಾಗಿ ಕಣ್ಣುಗಳಲ್ಲಿ ಹನಿ ಜಿನುಗಿತು. ರಾಧೆಯೇ ಇಲ್ಲವಾದ ಮೇಲೆ ಇನ್ನು ಮುಂದೆ ಈ ವೇಣುನಾದ ಯಾರಿಗಾಗಿ?

'ರಾಧಾ ಮನೋಹರ ವೇಣು ನಿನಾದ

ರಾಧೆಯಿಲ್ಲದ ಮೇಲೆ ಉಳಿದುದು ಬರಡು ವಿಷಾದ'

ಎಂದುಕೊಂಡ ಕೃಷ್ಣ ಕೈಯಲ್ಲಿದ್ದ ಕೊಳಲನ್ನು ಮುರಿದು ತುಂಡು ಮಾಡಿ ಬದಿಯಲ್ಲಿದ್ದ ಪೊದೆಗೆ ಎಸೆದ.

ಮತ್ತೆಂದೂ ಕೃಷ್ಣನ ಕೊಳಲಿನ ಕರೆ ಕೇಳಿಸಲಿಲ್ಲ.



**ನಾರಾಯಣ ಶೆಟ್ಟಿಗಾರ್**
**ಬೆಂಗಳೂರು**




ಯತೀಶ್ ಎಲ್. ಶೆಟ್ಟಿಗಾರ್,
ಸಿದ್ಧಕಟ್ಟೆ ,
ವಿದ್ಯಾರಣ್ಯಪುರ, ಬೆಂಗಳೂರು



ಕವಿತಾವಾಣಿ

# ರೈತನೆಂದರೆ

ರೈತನೆಂದರೆ
ಕೊಳಕು ಕೈಯಲ್ಲಿ
ಅಮೃತ ಉಣಿಸುವವನು

ರೈತನೆಂದರೆ
ಕಟ್ಟುಮಸ್ತಾದ ದೇಹವಿದ್ದರೂ
ಅಭಿಮಾನಿಗಳಿಲ್ಲದವನು

ರೈತನೆಂದರೆ
ಬೆವರ ವಾಸನೆಯಿಂದ
ಅಸ್ಪರ್ಶ ಎನಿಸಿಕೊಂಡವನು

ರೈತನೆಂದರೆ
ಮನೆಯಲ್ಲಿದ್ದ ವಸ್ತು ಮಾರಿ
ಮತ್ತೆ ಬೆಳೆಗೆ ಬೀಜ ಖರೀದಿಸುವವನು

ರೈತನೆಂದರೆ
ತಾನು ಬಡವನಾಗಿ
ಬೇರೆಯವರನ್ನು ಶ್ರೀಮಂತರನ್ನಾಗಿಸುವವನು

ರೈತನೆಂದರೆ
ಯಾವಾಗಲೂ ತನಗೂ, ಬೆಳೆಗೂ
ಔಷಧಿಗೆ ಹೆಚ್ಚು ಖರ್ಚು ಮಾಡುವವನು

ರೈತನೆಂದರೆ
ಕ್ರಿಮಿ ಕೀಟಗಳ ಗೆಳೆಯ ಮತ್ತು
ರಾಜಕೀಯ ಕ್ರಿಮಿಗಳ ಬಲಿಪಶು

ರೈತನೆಂದರೆ
ದೇಶದ ಬೆನ್ನೆಲುಬಾಗಿ
ತನ್ನ ಬೆನ್ನೆಲುಬ ಮುರಿದುಕೊಂಡವನು

ರೈತನೆಂದರೆ
ಮೋಡ ಮುಸುಕಿದ
ವಾತಾವರಣದಲ್ಲಿ
ರವಿ ಬೆಳಕ ಕಂಡು ಸದಾ
ನಗುತ್ತಿರುವವನು

ರೈತನೆಂದರೆ

ಒಂಟಿಕಾಲಲ್ಲಿ ನಿಂತು
ಧ್ಯಾನ ಮಾಡುವ
ಬಕ ಪಕ್ಷಿಯ ಸಹಜ ಗೆಳೆಯ

ಪಕ್ಷಿಯೂ ಅವನ
ನಿಷ್ಠಾವಂತ ಕಾವಲುಗಾರ



ನರೇಂದ್ರ ಕಬ್ಬಿನಾಲೆ
ಮುದ್ರಾಡಿ
ಉಡುಪಿ




# ಆನ್ ಲೈನ್ ದರೋಡೆ ಮತ್ತು ಮನುಷ್ಯನ ವಿಶ್ವಾಸಾರ್ಹತೆಯ ಸಂದಿಗ್ಧತೆ

ಅಮೆರಿಕಾದ ಲೇಖಕ ಸ್ಟೀಫನ್ ಕಿಂಗ್ ಹೇಳುವಂತೆ, "ಮುಗ್ಧರ ನಂಬಿಕೆಯೇ, ವಂಚಕರ ಅತ್ಯಂತ ಉಪಯುಕ್ತ ಸಾಧನ. "ಇತ್ತೀಚೆಗಿನ ದಿನಗಳಲ್ಲಿ ಆನ್ ಲೈನ್ ವಂಚನೆ ಮತ್ತು ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದನ್ನು ಹೇಳಿಕೊಳ್ಳಲಾಗದೆ, ಪರಿಹಾರ ಸಿಗದೇ, ಭಯದಿಂದ, ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಈ ಸಂದರ್ಭದಲ್ಲಿ, ಇದನ್ನು ತಡೆಗಟ್ಟುವುದು ಹೇಗೆ, ಅಕಸ್ಮಾತ್ ವಂಚನೆಯಲ್ಲಿ ಸಿಕ್ಕಿಹಾಕಿಕೊಂಡರೆ ಆತಂಕಪಡದೆ ಅದರಿಂದ ಬಿಡುಗಡೆಯಾಗುವುದು ಹೇಗೆ? ಎನ್ನುವುದನ್ನು ಸಾರ್ವಜನಿಕ ವೇದಿಕೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಮುಕ್ತವಾಗಿ ಚರ್ಚಿಸಬೇಕಾದ ಅಗತ್ಯವಿದೆ. ಇಲ್ಲಿ ಶೋಷಿತರು ಎಲ್ಲಾ ವರ್ಗ, ಜಾತಿ, ಲಿಂಗ, ಶಿಕ್ಷಿತ, ಅಶಿಕ್ಷಿತ, ಹೀಗೆ ಎಲ್ಲರನ್ನು ಒಳಗೊಂಡಿರುವುದರಿಂದ, ಮತ್ತು ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ಈ ಕುರಿತು ನಿರಂತರವಾಗಿ ಹೆಚ್ಚಿನ ಅರಿವು ಮತ್ತು ಪ್ರಜ್ಞೆ ಮೂಡಿಸಬೇಕಾದ ತುರ್ತಿದೆ.

ಡಿಜಿಟಲ್ ಸಂವಹನಗಳು, ಅನಿವಾರ್ಯವಾಗಿ, ಉಪಯುಕ್ತವಾಗಿ, ಸಮಯ ಉಳಿತಾಯ ಮಾಡುತ್ತಾ ನಮ್ಮ ಜೀವನವನ್ನು ರೂಪಿಸುತ್ತಿರುವ ಈ ಯುಗದಲ್ಲಿ, ಇಂಟರ್ನೆಟ್ ಪೂರಕವೂ ಹೌದು, ಅಷ್ಟೇ ಅಪಾಯಕಾರಿಯೂ ಹೌದು. ನಮ್ಮ ವೈಯಕ್ತಿಕ ಮಾಹಿತಿಗಳು ನಮಗರಿವಿಲ್ಲದೆ ಸಾರ್ವಜನಿಕಗೊಂಡು 'ಡೇಟಾ'ದ ರೂಪದಲ್ಲಿ ಇಂತಹ ವಂಚಕರ ಜಾಲಗಳಿಗೆ ಸುಲಭವಾಗಿ ಸಿಗುತ್ತಿರುವುದು ಕಠೋರ ವಾಸ್ತವ. ಈ ಮಾಯಾಜಾಲಗಳಿಂದ ತಪ್ಪಿಸಿಕೊಳ್ಳಲು, ನಮ್ಮನ್ನಾಳುವವರ ಸೂಕ್ತ ಕಟ್ಟೆಚ್ಚರದ ಕ್ರಮಗಳ ನಡುವೆ, ನಮ್ಮ ಸ್ವಯಂ-ಶಿಸ್ತು, ಮಾನಸಿಕ ಎಚ್ಚರ ಮತ್ತು ವಿವೇಚನೆಯ ಅಗತ್ಯವಿರುತ್ತದೆ. ಇಲ್ಲಿ, ಆರ್ಥಿಕ ನಷ್ಟದ ಜೊತೆಗೆ, ಈ ವಂಚನೆಯ ಆಳವಾದ ಪರಿಣಾಮವೆಂದರೆ ಮನುಷ್ಯ- ಮನುಷ್ಯರ ನಡುವೆ ಕುಸಿಯುತ್ತಿರುವ ನಂಬಿಕೆಯ ಪ್ರಮಾಣ. ಇಂದು, ಸ್ವಶ್ರಮವಿಲ್ಲದ, ಬೆವರು ಸುರಿಸದ, ಆತ್ಮಶುದ್ಧಿಯಿಲ್ಲದ, ಸುಲಭದ ಹಣಗಳಿಕೆಯ ಮಾರ್ಗಗಳನ್ನು ಕಂಡುಹಿಡಿಯುವ ಹೃದಯಹೀನರ ಸಂಖ್ಯೆ ಹೆಚ್ಚಾಗುತ್ತಿದೆ. ಇಂತವರಿಗೆ ಯಾವುದೇ ಪಾಪಪ್ರಜ್ಞೆ ಕಾಡದೇ, ಕಾನೂನಿನ ಭಯವಿಲ್ಲದೆ ಐಷಾರಾಮಿ ಬದುಕು ನಡೆಸುವುದನ್ನು ನಾವು ಕಾಣುತ್ತೇವೆ. ಅವರಿಗೆ ತಕ್ಕ ಶಿಕ್ಷೆಯಾಗದಂತಹ, ಅವರನ್ನು ರಕ್ಷಿಸುವ ವ್ಯವಸ್ಥೆಗಳಲ್ಲಿ ನಾವಿಂದು ಬದುಕುತ್ತಿರುವುದರಿಂದ ಸಾಮಾನ್ಯ ಜನರು ಭ್ರಮನಿರಸನರಾಗಿದ್ದಾರೆ. ಬೃಹತ್ ಪ್ರಮಾಣದಲ್ಲಿ ಜನರು, ಸಂಸ್ಥೆಗಳು ತಾವು ಪ್ರತಿದಿನ ಅವಲಂಬಿಸುವ ಡಿಜಿಟಲ್ ವ್ಯವಸ್ಥೆಗಳ ಮೇಲಿನ ನಂಬಿಕೆ ಇಡಬೇಕಾದ, ಬದಲಾದ ಕಾಲದ ಅನಿವಾರ್ಯತೆಯ ನಡುವೆ, ವಂಚನೆಗಳು ಅತಿರೇಕವಾದಾಗ, ಮನುಷ್ಯ ಸಂಬಂಧಗಳು ಬೆದರಿಕೆಗೆ ಒಳಗಾಗುತ್ತದೆ. ಇದು ಸಮಾಜದಲ್ಲಿ ಸಂದೇಹ ಮತ್ತು ಪ್ರತ್ಯೇಕತೆಯ ವಾತಾವರಣವನ್ನು ಸೃಷ್ಟಿಸುತ್ತದೆ.

ಸಂಘ ಜೀವಿಯೆನ್ನುವ ಮನುಷ್ಯ ಬಾಂಧವ್ಯವನ್ನು ಹಿಡಿದಿಡುವ ಮೂಲಭೂತ ಅಂಶ, ಪರಸ್ಪರ ವಿಶ್ವಾಸಾರ್ಹತೆ. ಇದು ಸಮುದಾಯಗಳನ್ನು ಒಗ್ಗೂಡಿಸಿ, ಸಹಕಾರವನ್ನು ಸುಗಮಗೊಳಿಸಿ, ಮಾನವ ಪ್ರಗತಿಯನ್ನು ಪೋಷಿಸುತ್ತದೆ. ಇದು, ಡಿಜಿಟಲ್ ಯುಗದಲ್ಲಿ ದಿನದಿಂದ ದಿನಕ್ಕೆ ಸಂಪೂರ್ಣ ಅಪನಂಬಿಕೆಯತ್ತ ತಿರುಗುತ್ತಿರುವುದು ವಿಷಾದನೀಯ. ಇಲ್ಲಿ, ವಂಚಕರು, ನಾವು ಸಾಮಾನ್ಯವಾಗಿ ನಂಬುವ ಸರ್ಕಾರಿ ಸಂಸ್ಥೆಗಳ ಪ್ರತಿನಿಧಿಗಳು ಅಥವಾ ಆಪ್ತ ಸಂಬಂಧಿಕರಂತೆ ನಾಟಕವಾಡಿ ಈ ಮೂಲಭೂತ ಮಾನವ ಗುಣವನ್ನು ಬಳಸಿಕೊಳ್ಳುತ್ತಾರೆ.

ಭಾರತದಲ್ಲಿರುವ ಅಸಂಖ್ಯಾತ ನಿರುದ್ಯೋಗಿ ಯುವ ಜನತೆಯನ್ನು ಗುರಿಯಾಗಿಸಿಕೊಂಡ ಆನ್ ಲೈನ್ ಉದ್ಯೋಗ ಹಗರಣಗಳು ಒಂದು ಸಾಮಾನ್ಯ ಉದಾಹರಣೆಯಾಗಿದೆ. ನಕಲಿ ನೇಮಕಾತಿ ಸಂಸ್ಥೆಗಳು ಉತ್ತಮ ಸಂಬಳದ ಉದ್ಯೋಗಗಳನ್ನು ನೀಡುವ ಭರವಸೆ ನೀಡಿ, "ಕೊಡಿಸಲಿಕ್ಕಾಗಿ" ಭಾರಿ ಶುಲ್ಕ ವಿಧಿಸಿ ನಂತರ ಕಣ್ಮರೆಯಾಗುತ್ತವೆ. ಇಂತಹ ಜಾಲಗಳ ಬಲಿಪಶುಗಳು ತಮ್ಮ ಹಣವನ್ನು ಮಾತ್ರವಲ್ಲದೆ, ಕಾನೂನುಬದ್ಧ ಉದ್ಯೋಗಾವಕಾಶಗಳ ಮೇಲಿನ ನಂಬಿಕೆಯನ್ನು ಕೂಡ ಕಳೆದುಕೊಳ್ಳುತ್ತಾರೆ. ಈ ನಂಬಿಕೆಯ ಕುಸಿತದಿಂದಾಗಿ - ಜನರು ಯಾವುದೇ ಉದ್ಯೋಗ ಸ್ವೀಕರಿಸುವ ಮೊದಲು ಅನುಮಾನ ವ್ಯಕ್ತಪಡಿಸುತ್ತಾರೆ. ಇಂತಹ ಸಂದರ್ಭದಲ್ಲಿ ಸಮರ್ಪಕ ಪರಿಶೀಲನೆ, ಪ್ರತಿಕ್ಷಣದ ಎಚ್ಚರ, ಸಂಯಮ ಸಹಾಯ ಮಾಡುತ್ತದೆ.

ಮನುಷ್ಯನ ಈ ನಂಬಿಕೆ ದ್ರೋಹದಲ್ಲಿ ದುರಾಸೆ ಮಹತ್ವದ ಪಾತ್ರವಹಿಸುತ್ತದೆ. ಮನುಷ್ಯನ ಮನದಾಳದಲ್ಲಿರುವ ಅತಿಯಾದ ಬಯಕೆಗಳು ಮತ್ತು ಅದಕ್ಕಾಗಿ ಶ್ರಮವಿಲ್ಲದ ತ್ವರಿತ ಲಾಭಗಳಿಕೆಯ ಉತ್ಕಟ ಆಸೆಯನ್ನು ವಂಚಕರು ಬಳಸಿಕೊಳ್ಳುತ್ತಾರೆ - ಇದು ಲಾಟರಿ ಹಗರಣಗಳು, ಉದ್ಯೋಗ ಕೊಡುಗೆಗಳು, ಹೂಡಿಕೆ ವಂಚನೆಗಳು, ಬೆಟ್ಟಿಂಗ್ ಗಳ ರೂಪದಲ್ಲಿರಬಹುದು. "ತ್ವರಿತವಾಗಿ ಶ್ರೀಮಂತರಾಗುವ" ಹೂಡಿಕೆ ಯೋಜನೆಗಳು, ಸಂಪತ್ತಿನ ಭರವಸೆ ನೀಡುವ ಸಂದೇಶಗಳು, ತಮ್ಮ ತಾರ್ಕಿಕ ಚಿಂತನೆಯನ್ನು ಮೀರಿಸುವ ದುರಾಸೆಯನ್ನು ಹೊಂದಿದವರನ್ನು ಸುಲಭವಾಗಿ ಬಲಿ ತೆಗೆದುಕೊಳ್ಳುತ್ತವೆ.

ಇದು, ಬುದ್ಧನ ಎಚ್ಚರದ ನುಡಿ, "ದುರಾಸೆಯಿಲ್ಲದವನಿಗೆ, ಯಾವುದೇ ದುಃಖವಿಲ್ಲ" ನೆನಪಿಸುತ್ತದೆ. ನಾವು, ಅಪರಿಮಿತ ಆಸೆಗಳನ್ನು ಪ್ರಚೋದಿಸುವ ವರ್ತಮಾನದ ಲೋಕದಲ್ಲಿ ಸಂತೃಪ್ತಿಯ ಮತ್ತು ವಿವೇಕದ ಮನಸ್ಥಿತಿಯನ್ನು ಬೆಳೆಸಿಕೊಂಡರೆ, ಆನ್ ಲೈನ್ ಮೋಸಕ್ಕೆ ಬಲಿಯಾಗುವ ಸಾಧ್ಯತೆಯು ಕಡಿಮೆ ಇರುತ್ತದೆ. ಅದೆಂದರೆ, ಆರ್ಥಿಕ ಯಶಸ್ಸಿಗೆ ಸ್ವಪ್ರಯತ್ನದ ಅಗತ್ಯವಿದೆ, ಅದರಿಂದ ಗಳಿಸಿದ್ದು ಮಾತ್ರ ಆತ್ಮತೃಪ್ತಿ ಕೊಡುತ್ತದೆ ಎಂಬ ಅರಿವು. ಸಾಂದರ್ಭಿಕವಾಗಿ, ಜಗತ್ತನ್ನೇ ಗೆಲ್ಲಲು ಹೊರಟಿದ್ದ ಅಲೆಕ್ಸಾಂಡರ್, ತಾನು ಸಾಯುವಾಗ ತನ್ನೆರಡು ಕೈಗಳನ್ನು ಖಾಲಿಯಾಗಿ, ಎಲ್ಲರೂ ನೋಡುವಂತೆ ಶವವಸ್ತ್ರದ ಹೊರಗಿಡಬೇಕೆಂದು ಹೇಳಿದ್ದ ಎನ್ನುವ ಪ್ರಸಂಗ ನೆನಪಾಗುತ್ತದೆ. ಜೀವನವಿಡೀ ಸಂಪತ್ತು ಮತ್ತು ಪ್ರಸಿದ್ಧಿಗಾಗಿ ಹಂಬಲಿಸುವ ಮನುಷ್ಯ, ತಾನು ಸಾಯುವಾಗ ಖಾಲಿ ಕೈಯಲ್ಲಿ ತೆರಳುತ್ತಾನೆ ಎನ್ನುವ ಸಂದೇಶ ಜನರಿಗೆ ಕೊಡಬೇಕೆಂದು ಅವನು ಬಯಸಿದ್ದ ಎನ್ನಲಾಗುತ್ತದೆ. ಹಾಗೆಯೇ ರಷಿಯಾದ ಸಾಹಿತಿ ಟಾಲ್ ಸ್ಟಾಯ್ ಬರೆದ "ಒಬ್ಬ ಮನುಷ್ಯನಿಗೆ ಎಷ್ಟು ಜಾಗ ಬೇಕು?" ಕತೆಯಲ್ಲಿ ರೈತನೊಬ್ಬ ಹೆಚ್ಚಿನ ಭೂಮಿಯ ದುರಾಸೆಯಲ್ಲಿ ಸಾಗುತ್ತಾ ದಾರಿಯಲ್ಲಿಯೇ ಸತ್ತು, ಮನುಷ್ಯನಿಗೆ ಅಂತಿಮವಾಗಿ ಬೇಕಾಗಿರುವುದು, ಅವನನ್ನು ಸಮಾಧಿ ಮಾಡಲು ಸಾಕಾಗುವಷ್ಟು ಭೂಮಿ ಮಾತ್ರ ಎನ್ನುವುದನ್ನು ಸಾಬೀತುಪಡಿಸುತ್ತಾನೆ.

ಇನ್ನು, ಸೈಬರ್ ವಂಚನೆಗಳಿಂದ ಬಚಾವಾಗುವಲ್ಲಿ ಮಾನಸಿಕ ಎಚ್ಚರ ಅತ್ಯಗತ್ಯ. ಆನ್ ಲೈನ್ ವಂಚನೆಗಳು ಸಾಮಾನ್ಯವಾಗಿ ತುರ್ತು ಸಂದೇಶಗಳು, ಇಮೇಲ್ ಗಳು ಮತ್ತು ಕರೆಗಳ ರೂಪದಲ್ಲಿ ಬರುತ್ತವೆ. ಆಗ, ಭಾವನೆಗಳ ಜಾಗದಲ್ಲಿ ಬುದ್ಧಿಶಕ್ತಿ ಹೆಚ್ಚಿನ ಉಪಯೋಗಕ್ಕೆ ಬರುತ್ತದೆ- ವೈಯುಕ್ತಿಕ ಡೇಟಾವನ್ನು ಹಂಚಿಕೊಳ್ಳುವ ಮೊದಲು ಮೂಲಗಳನ್ನು ಪರಿಶೀಲಿಸುವುದು ಒಳ್ಳೆಯದು. ಈ ಆತಂಕಗಳ ನಡುವೆ, ಇಂದು ಡಿಜಿಟಲ್ ವ್ಯವಹಾರ ಬಹಳ ಉಪಯುಕ್ತವಾದ್ದರಿಂದ ಅದನ್ನು ಭಯಮುಕ್ತಗೊಳಿಸುವುದು ಅತ್ಯಗತ್ಯ.

ಜನರು ಡಿಜಿಟಲ್ ವಂಚನೆಗೆ ಬಲಿಯಾದಾಗ, ಭ್ರಮನಿರಸನದಿಂದ ದೀರ್ಘಾವಧಿಯ ಪರಿಣಾಮಗಳನ್ನು ಉಂಟುಮಾಡಬಹುದು. ಉದಾಹರಣೆಗೆ, ಆನ್ ಲೈನ್ ಬ್ಯಾಂಕಿಂಗ್ ನಲ್ಲಿ ನಂಬಿಕೆ ಇಟ್ಟಿದ್ದ ವ್ಯಕ್ತಿ, ನಗದು ವಹಿವಾಟುಗಳಿಗೆ ಮರಳಬಹುದು, ಕಾನೂನುಬದ್ಧ ಸಂಸ್ಥೆಗಳೊಂದಿಗೆ ಸಹ ಯಾವುದೇ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವ ಮೊದಲು ಹಿಂಜರಿಯಬಹುದು, ವಂಚನೆಗೊಳಗಾದ ಉದ್ಯಮಿಗಳು ಭವಿಷ್ಯದ ಎಲ್ಲಾ ಪಾಲುದಾರಿಕೆಗಳ ಮೇಲೆ ಅನುಮಾನಗಳನ್ನು ಹೊಂದಬಹುದು. ಇದು, ಒಟ್ಟಾರೆಯಾಗಿ ಆರ್ಥಿಕ ಪ್ರಗತಿಯನ್ನು ನಿಧಾನಗೊಳಿಸುತ್ತದೆ. ಆದ್ದರಿಂದ ಯಾವುದೇ ವ್ಯವಹಾರಗಳನ್ನು ಮಾಡುವ ಮೊದಲು ಸತ್ಯಾಂಶಗಳನ್ನು ಪರಿಶೀಲಿಸುವುದು ಶ್ರೇಯಸ್ಸು.

ಈ ನಿಟ್ಟಿನಲ್ಲಿ, ಡಿಜಿಟಲ್ ವಹಿವಾಟುಗಳಲ್ಲಿ ಪಾರದರ್ಶಕತೆ, ಸೈಬರ್ ಕಾನೂನುಗಳ ಕಟ್ಟುನಿಟ್ಟಿನ ಜಾರಿಗೆ ಮತ್ತು ಸಾರ್ವಜನಿಕ ಜಾಗೃತಿ ಅಭಿಯಾನಗಳು ಆನ್ ಲೈನ್ ಸಂವಹನಗಳಲ್ಲಿ ನಂಬಿಕೆಯನ್ನು ಪುನಃಸ್ಥಾಪಿಸಬಹುದು. ಭಾರತೀಯ ಐಟಿ ಕಾಯ್ದೆ ಕಾನೂನು ಸಹಾಯವನ್ನು ಒದಗಿಸುತ್ತದೆ. ಆದರೆ ಕೆಲವೊಮ್ಮೆ, ಬಲಿಪಶುಗಳು ಸಾಮಾಜಿಕ ಕಳಂಕ ಅಥವಾ ಯಾವುದೋ ಅವ್ಯಕ್ತ ಭಯದಿಂದಾಗಿ ವಂಚನೆಯ ಬಗ್ಗೆ ವರದಿ ಮಾಡಲು ಹಿಂಜರಿಯುತ್ತಾರೆ. ಆದ್ದರಿಂದ, ಬಲಿಪಶುಗಳನ್ನು ದೂಷಿಸದೆ ಸೈಬರ್ ವಂಚನೆಯ ಕುರಿತು ಮುಕ್ತ ಸಂವಾದವನ್ನು ಪ್ರೋತ್ಸಾಹಿಸುವುದು, ಡಿಜಿಟಲ್ ವ್ಯವಸ್ಥೆಗಳಲ್ಲಿ ನಂಬಿಕೆಯನ್ನು ಪುನಃಸ್ಥಾಪಿಸಲು ನಿರ್ಣಾಯಕವಾಗಿದೆ.

ಅದೇ ರೀತಿ, ಸೈಬರ್ ಬೆದರಿಕೆಗಳಿಂದ ತೀವ್ರ ಭಾವನಾತ್ಮಕ ಮತ್ತು ಮಾನಸಿಕ ದುಷ್ಪರಿಣಾಮಗಳು ವ್ಯಕ್ತವಾಗಬಹುದು, ಇದು, ಆತಂಕ, ಖಿನ್ನತೆ ಮತ್ತು ಆತ್ಮವಿಶ್ವಾಸದ ನಷ್ಟಕ್ಕೆ ಕಾರಣವಾಗಬಹುದು. ಯಾವುದೇ, ಆನ್ ಲೈನ್ ಕಿರುಕುಳ ಹತಾಶೆಗೆ ಕಾರಣವಾಗಬಾರದು; ಬದಲಾಗಿ, ತಾಳ್ಮೆಯನ್ನು ಬೆಳೆಸಿಕೊಳ್ಳಬೇಕು ಮತ್ತು ಕಾನೂನು ಸಹಾಯದ ಮೂಲಕ ನ್ಯಾಯವನ್ನು ಪಡೆಯಬೇಕು. ಮೌನವಾಗಿ ಬಳಲುವುದರ ಬದಲಿಗೆ ಅಪರಾಧಗಳನ್ನು ವರದಿ ಮಾಡುವುದೇ ಅತ್ಯಂತ ಪ್ರಬಲ ಅಸ್ತ್ರ.

ಕೊನೆಯದಾಗಿ, ಇಂದು, ಡಿಜಿಟಲ್ ಸುರಕ್ಷತೆಯ ಕುರಿತು ಶಾಲೆ, ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳು, ಮತ್ತು ಕೆಲಸದ ಸ್ಥಳದ ತರಬೇತಿಯು, ಸೈಬರ್ ಬೆದರಿಕೆಗಳ ವಿರುದ್ಧ ಸಾಮೂಹಿಕ ಜನಜಾಗ್ರತಿಯನ್ನು ಹೆಚ್ಚಿಸುತ್ತದೆ. ಈ ಅರಿವು, ಕೇವಲ ತಾಂತ್ರಿಕ ತರಬೇತಿ ಮಾತ್ರವಲ್ಲ, ಬದಲಾಗಿ, ಇದೊಂದು ಆಳವಾದ ಮಾನಸಿಕ, ನೈತಿಕ ತಾತ್ವಿಕತೆಯಾಗಬೇಕಾಗಿದೆ. ಮನುಷ್ಯರ ನಡುವೆ ಕಳೆದುಹೋಗುತ್ತಿರುವ ನಂಬಿಕೆ ಮರುಸ್ಥಾಪನೆಯಾಗಬೇಕಾಗಿದೆ. ಬುದ್ಧ ಹೇಳಿದಂತೆ, ದುಃಖ ಮುಕ್ತ ಜೀವನ ನಡೆಸಲು ಸರಿಯಾದ ಸಾವಧಾನತೆ ಮತ್ತು ತಿಳುವಳಿಕೆ ಅತ್ಯಗತ್ಯ. ಅದೇ ರೀತಿ, ಡಿಜಿಟಲ್ ಸುರಕ್ಷತೆಗೆ ತಂತ್ರಜ್ಞಾನದೊಂದಿಗೆ ನಿರಂತರ ಸ್ವಶಿಸ್ತು ಮತ್ತು ನೈತಿಕತೆ ಮುಖ್ಯ. ಮನುಷ್ಯರ ಬಗ್ಗೆ ನಂಬಿಕೆಯನ್ನು ಸಂಪೂರ್ಣವಾಗಿ ತ್ಯಜಿಸುವುದಲ್ಲ, ಅದನ್ನು ಪರಿಷ್ಕರಿಸುವುದು, ಬುದ್ಧಿವಂತಿಕೆಯೊಂದಿಗೆ ನಂಬುವುದು, ಕುರುಡಾಗಿ ಅಲ್ಲ ಎನ್ನುವ ಅರಿವು ಅಪೇಕ್ಷಣೀಯ.



ಡಾ. ಜ್ಯೋತಿ
ಸಹಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು



AI generated image: No photo credits required

# ನರಸಿಂಹ ಅವತಾರ

ದುಷ್ಟರ ದಮನಕೆ ವಿವಿಧವತಾರವ
ತಾಳಿದ ದೇವನು ಶ್ರೀ ವಿಷ್ಣು |
ಕಷ್ಟದಲಿದ್ದಿಹ ಬಕುತರ ಮೊರೆಯನು
ಕೇಳುವ ದೇವಮಹಾವಿಷ್ಣು ||೧||

ತಪವನು ಮಾಡುತ ರಕ್ಕಸನೊರ್ವನು
ಪಡೆದನು ಬೊಮ್ಮನ ವರವನ್ನು |
ಉಪಟಳ ನೀಡುತ ಕಂಗೆಡಿಸಿದನವ
ದೇವರ ಲೋಕದ ನಿದ್ದೆಯನು ||೨||

ಕಂಬದಲಿಹನೇ ನಿನ್ನಯ ದೇವರು
ಹಂಗಿಸಿ ಕೇಳಲು ರಕ್ಕಸನು |
ನಂಬಿದ ಬಕುತನು ಅಹುದಹುದೆನ್ನಲು
ನರಸಿಂಹನ ತರ ಬಂದಿಹನು ||೩||

ರಕ್ಕಸನಾರ್ಭಟ ಕುಗ್ಗಿಸಿಯಾತನ
ನಖದಲ್ಲಿರಿಯುತ ವಧಿಸಿದನು |
ಒಳ ಹೊರಗಲ್ಲದ ಹಗಲಿರುಳಲ್ಲದ
ಶಸ್ತ್ರವ ಬಳಸದ ಸಾವದನು ||೪||||

ಗಡಗಡ ನಡುಗಿಸಿ ತೊಡೆಯಲಿ ಮಲಗಿಸಿ
ಹೊಸಿಲಲಿ ಕೂರುತ ಸಂಹಾರ |
ಬಕುತನ ರಕ್ಷೆಗೆ ನೀಚನ ಶಿಕ್ಷೆಗೆ
ನರಹರಿ ರೂಪದೊಳವತಾರ ||೫||

ಕುಗ್ಗದ ಕೋಪವು ತಗ್ಗಿತು ನೋಡಿರಿ
ಪ್ರಹ್ಲಾದನವನ ಬೇಡಿರಲು |
ಹಿಗ್ಗಿತು ಮೂಜಗ ವಿಷ್ಣುವು ತಾಳಿದ
ಹೊಸ ಅವತಾರವು ತಣಿದಿರಲು ||೬||



**ಶೋಭಾ ಹರಿಪ್ರಸಾದ ಶೆಟ್ಟಿಗಾರ**
**ಉಡುಪಿ**



AI generated image: No photo credits required

# ಸೀರೆ ಸೆರಗು

ತನುವ ಬಳಸಿ, ಒಲವ ಧರಿಸಿ, ಮೈಯಾನಿಸಿ;
ಸೊಬಗ ಸೌಂದರ್ಯದಲ್ಲೇ ನಿರತಳಾಕೆ -
ಆಕೆ ಸೀರೆ ಸೆರಗ ಲಾಸ್ಯಮತಿಯು.

ಕಷ್ಟವೆಂಬ ನೆರಿಗೆಯಲ್ಲಿ, ಚೆಲುವೆ ಎಂಬ
ಸುಖವ ಉಣಿಸಿ,
ತನುಮನವ ಬಳಸಿ-ಬಳಸಿ ಸುತ್ತಿದಳಾಕೆ -
ಆಕೆ ಸೀರೆ ಸೆರಗ ಆಲಂಬನ ವೇಣಿಯು.

ನೋವ ಮರೆಸಿ, ಆನಂದವೇ ಆವರಿಸಿದ
ದಿರಿಸು-ವರಸೆ,
ಲಘು ವೈಯಾರದ ನೃತ್ಯ ಲಾಲಿತ್ಯವಾಕೆ -
ಆಕೆ ಸೀರೆ ಸೆರಗ ಮಧು ಲಾಂಛನ ಗತಿಯು.

ನಾಚುಮನಕೆ ಸಹೋದರಿಯು,
ಪೇಚುಮನಕೆ ಸಹಕಾರಿಯು,
ತನ್ನರಿವ ತಾನರಿಯದೆ ಮನಕೆ
ಮುದನೀಡುವಳಾಕೆ -
ಆಕೆ ತನ್ನೊಲವ ಸೀರೆ ಸೆರಗ ವೈಯಾರಿಯು.

'ಅಮ್ಮ' ಬಾಂಧವ್ಯಕೆ ಬೆಸುಗೆ ನೇಯ್ದು,
ಹಸಿದ ಹಸುಳೆಯ ಹಾಲುಣಿಸುವ,
ತವಕ ಸೆರೆಯ ಬಳಿಯೇ ಇರುವವಳಾಕೆ -
ಆಕೆ ಸೀರೆ ಸೆರಗ ವಾತ್ಸಲ್ಯ ಲಹರಿಯು.

ಬಿಸಿಲೇ ಇರಲಿ, ಮಳೆಯೇ ಇರಲಿ,
ರಣಗುಡುವ ಚಳಿಯೇ ಇರಲಿ;
ತನ್ನ ದೈನ್ಯ ನಿರತ ಕರ್ತವ್ಯಕೆ ಭಂಗ ತರಲೊಲ್ಲಳಾಕೆ -
ಆಕೆ ಸೀರೆ ಸೆರಗ ಪ್ರೀತಿ ಸೆರೆಯ ಚಾರಿಣಿಯು.

ಬಿಗುಮಾನದ ಬಿರುಸು ಮುಖದೆಡೆಯಲ್ಲಿ,
ದಿಟ್ಟ ಧೀರೆ ಸ್ವಾಭಿಮಾನದ ಕಲೆ ಹೊತ್ತವಳಾಕೆ -
ಆಕೆ ಸೀರೆ ಸೆರಗ ವೀರವನಿತೆಯು.

ಮಧುವಾಲಿಂಗನದ ಬಿಸಿ ಉಸಿರ ಸುಖ ಸೆರೆಯ,
ಮಧು ಅಧರದಲ್ಲಿ ತನ್ನ ಆದರವ ಮೆರೆದ,
ಮಧುಮತ್ತ ಉನ್ಮತ್ತಳಾಕೆ -
ಆಕೆ ಸೀರೆ ಸೆರಗ ಮಧುವಂತಿಯು.



**ಎಕ್ಕಾರ್ ಡಿ. ಪಿ. ಶೆಟ್ಟಿಗಾರ್**
**ಶೇಷಾದ್ರಿಪುರಂ, ಬೆಂಗಳೂರು**

ಶೆಟ್ಟಿಗಾರ ವಾಣಿಯ ಮುಖ್ಯರಿಗೆ, ವಾಚಕರಿಗೆ ಮತ್ತು ತಮ್ಮ ಅಮೂಲ್ಯ ಬರೆಹಗಳ - ಚಿತ್ರ ಕಲೆ ಇತ್ಯಾದಿಗಳ ಮೂಲಕ ನಮ್ಮನ್ನು ಹೊಸ ಚಿಂತನೆಯೆಡೆ ಕರೆದೊಯ್ಯುತ್ತಿರುವ ಪ್ರತಿಭಾನ್ವಿತರಿಗೆ ಪತ್ರಿಕೆಯ ಮೊದಲ ವಾರ್ಷಿಕೋತ್ಸವಕ್ಕೆ ಹೃನ್ಮನದ ಶುಭಾಶಯಗಳು. ಸಾಗಿ ಬಂದ ಹಾದಿ ಅದ್ಭುತ. ಇದೇ ಭದ್ರ ನೆಲೆಗಟ್ಟಿನ ಮೇಲೆ ಇನ್ನಷ್ಟು ಯಶಸ್ಸಿನ ಗರಿಮೆಯೊಂದಿಗೆ ಮುನ್ನುಗ್ಗಲಿ ಶೆಟ್ಟಿಗಾರ ವಾಣಿ, ಸಮಾಜ ಬಾಂಧವರ ಸ್ವಪ್ರೇರಿತ ಪ್ರೋತ್ಸಾಹ ನಿರಂತರ ಹರಿದು ಬರಲಿ ಎಂದು ಹಾರೈಸುವ,

ತಮ್ಮೆಲ್ಲರ ವಿಧೇಯ,
**ಶೋಭಾ ಹರಿಪ್ರಸಾದ ಶೆಟ್ಟಿಗಾರ್ ಉಡುಪಿ**

ವರುಷದ ಹರುಷದಲಿ ಶೆಟ್ಟಿಗಾರ ವಾಣಿ
ಮೂಡಿತು ಬರಹಗಾರರ ಮನದ ಹಸಿರು ಧ್ವನಿ
ಓದುಗರ ಮನ ಸೆಳೆಯಿತು ವಿಭಿನ್ನ ಬರವಣಿಗೆ
ಓದುವ ಹವ್ಯಾಸ ಮಸ್ತಕದಿ ಬೆಳವಣಿಗೆ

ಜನಮನದಿ ಉಲ್ಲಾಸ ತುಂಬಲಿ
ಶೆಟ್ಟಿಗಾರ ವಾಣಿ ಉತ್ತುಂಗಕೇರಲಿ

**ಅನುರಾಧ ಉದಯ್ ಉಡುಪಿ**

ಪತ್ರಿಕೆ ಬಹಳ ಚೆನ್ನಾಗಿ ಬರ್ತಾ ಇದೆ. ನಿಮ್ಮ ಪರಿಶ್ರಮಕ್ಕೆ ಧನ್ಯವಾದಗಳು.

**ರಾಮಕೃಷ್ಣ ಸಾಲಿಕೇರಿ**

ಬಹಳ ಸಂತೋಷವಾಗುತ್ತಾ ಇದೆ ನಮ್ಮ ಚೊಚ್ಚಲ ಶೆಟ್ಟಿಗಾರವಾಣಿ ತನ್ನ ಮೊದಲ ವರ್ಷದ ಸಂಭ್ರಮಾಚರಣೆಯ ಸಂಧಿಕಾಲದಲ್ಲಿರುವುದು. ನಮ್ಮೆಲ್ಲರಲ್ಲಿರುವ ಬರವಣಿಗೆಯ ಕೃತುತ್ವ ಈ ವಾಹಿನಿಯ ಮೂಲಕ ಅನಾವರಣಗೊಳ್ಳುತ್ತಿರುವುದು ನಿಜಕ್ಕೂ ಮನಕೆ ಹಿತವೆನಿಸುತ್ತಿದೆ.

ಬೆಳೆಯ ಸಿರಿ ಮೊಳಕೆಯಲ್ಲಿ ಎಂಬಂತೆ ನಮ್ಮ ಈ ಅಭಿಯಾನ ನಿರಂತರ ಸಾರ್ಥಕ್ಯದ ಕಡೆಗೆ ಚಲಿಸುವಂತಾಗಲಿ. ಈ ನಿಟ್ಟಿನಲ್ಲಿ ಸತತವಾಗಿ ತಮ್ಮನ್ನು ತೊಡಗಿಸಿಕೊಂಡ ಸಮಸ್ತ ಸಂಪಾದಕೀಯ ಬಳಗದವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಧನ್ಯೋಸ್ಮಿ.

**ಎಕ್ಕಾರ್ ಡಿ ಪಿ ಶೆಟ್ಟಿಗಾರ್,**
**ಶೇಷಾದ್ರಿಪುರ, ಬೆಂಗಳೂರು**

ಜುಲೈ 2024ರ ಸಂಚಿಕೆಯಿಂದ ಮೊದಲ್ಗೊಂಡು ಈ ಜೂನ್ 2025ರ ಸಂಚಿಕೆಯನ್ನು ಬಿಡುಗಡೆಗೊಳಿಸುತ್ತಾ ಒಟ್ಟು ಹನ್ನೆರಡು ತಿಂಗಳುಗಳನ್ನು ಪೂರ್ಣಗೊಳಿಸಿ ಒಂದು ವರ್ಷವನ್ನು ಹಿಮ್ಮೆಟ್ಟಿ ನಿಂತು ಮುಂದಿನ ಇನ್ನೊಂದು ವರ್ಷಕ್ಕೆ ಅಡಿಯಿಡುತ್ತಿರುವ ಶೆಟ್ಟಿಗಾರ ವಾಣಿಯ ಯಶೋಗಾಥೆ ನಿಜವಾಗಿಯೂ ಪ್ರಶಂಸನೀಯ. ನಮ್ಮಲ್ಲಿರುವ ಹಿರಿಯ ಹಾಗೂ ಕಿರಿಯ ಪ್ರತಿಭಾವಂತ ಲೇಖಕರ ಹತ್ತು ಹಲವು ಕವನ, ಕಾವ್ಯ, ವಾಣಿಜ್ಯ ವಿಚಾರಗಳು, ತೆರಿಗೆ ಯೋಜನೆಗಳು ಇತ್ಯಾದಿ, ಇತ್ಯಾದಿ ವಿಚಾರಗಳ ಹೊಳೆಯ ಲಹರಿಯೇ ಹರಿದು ಬಂದಂತಿತ್ತು ಶೆಟ್ಟಿಗಾರ ವಾಣಿಯಲ್ಲಿ. ಇವೆಲ್ಲವನ್ನೂ ಸಕಾರಾತ್ಮಕವಾಗಿ ಅವಲೋಕಿಸಿದಾಗ ಶೆಟ್ಟಿಗಾರ ವಾಣಿಯ ಮಾಧ್ಯಮ ನಿಜವಾಗ್ಲೂ ಒಂದು ಘನ ಕಾರ್ಯದ ಸಾಧನೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ಮಹಾನ್ ಕಾರ್ಯದಲ್ಲಿ ಸಾಥ್ ಕೊಟ್ಟು ಭಾಗವಹಿಸಿದ ಕವಿ ಹೃದಯಿಗಳು, ಚಿತ್ರಗಾರರು ಹಾಗೂ ಪತ್ರಿಕೆಗೆ ಮೆರುಗು ಕೊಟ್ಟವರೆಲ್ಲರ ಕೊಡುಗೆಗಳು ಅಪಾರ. ಹೆಸರಾಂತ ಪತ್ರಿಕೆಗಳು ಹಾಗೂ ಮುದ್ರಣ ಮಾಧ್ಯಮಗಳನ್ನು ಸಂಪರ್ಕಿಸುವುದು ಸುಲಭ ಸಾಧ್ಯವಲ್ಲ. ಅವು ನಮ್ಮ ನಿಲುಕಿಗೆ ಸಿಗುವಂಥದ್ದೂ ಅಲ್ಲ. ಹಾಗಾಗಿ ಎಷ್ಟೋ ಪ್ರತಿಭಾವಂತ ಲೇಖಕರ ಉತ್ಸಾಹ ಉತ್ತಮ ಮಾಧ್ಯಮವಿಲ್ಲದೇ ಕಮರಿ ಹೋಗುವುದಿದೆ. ಇಂಥ ಸಂಕ್ರಮಣ ಕಾಲದಲ್ಲಿ ನಮ್ಮವರೇ ಆದ ಶ್ರೀ ನಾರಾಯಣ ಶೆಟ್ಟಿಗಾರರು ಈ ಒಂದು ಕಾರ್ಯದಲ್ಲಿ ಮುಂದಾಳತ್ವವನ್ನು ವಹಿಸಿ ಎಲೆಮರೆಯ ಕಾಯಿಯಂತೆ ನಮ್ಮಲ್ಲಿರುವ ಹಲವು ಲೇಖಕರಿಗೆ ಶೆಟ್ಟಿಗಾರ ವಾಣಿಯಂತಹ ಒಂದು ಮಾಧ್ಯಮವನ್ನು ಹೊರತಂದು ಮುದ್ರಣಕ್ಕೆ ಅನುವು ಮಾಡಿ ಕೊಟ್ಟಿರುವುದು ಶ್ಲಾಘನೀಯ. ಜೊತೆಗೆ ಇವರ ತಾಂತ್ರಿಕ ಜ್ಞಾನವನ್ನು ನಿಜವಾಗಿಯೂ ಮೆಚ್ಚತಕ್ಕದ್ದು. ಕ್ಲಪ್ತ ಸಮಯದಲ್ಲಿ WhatsApp ಮೂಲಕ ಕೂಟದ ಎಲ್ಲಾ ಸದಸ್ಯರಿಗೂ ತಲಪಿಸುವ ವ್ಯವಸ್ಥೆಯೂ ಚೆನ್ನಾಗಿದೆ. ಪತ್ರಿಕೆಯ ಸಂಪಾದಕ ಮಂಡಳಿಗೆ ವಂದನೆಗಳು ಹಾಗೂ ಅಭಿನಂದನೆಗಳು.

**ಮಾಧವ ಶೆಟ್ಟಿಗಾರ್ ಯು.**
**ವಿಜಯ ನಗರ, ಬೆಂಗಳೂರು.**

"ಶೆಟ್ಟಿಗಾರ ವಾಣಿ" ಮಾಸ ಪತ್ರಿಕೆ ಮೊದಲ ವರ್ಷದ ಹಬ್ಬ ಆಚರಿಸುವ ಈ ಸಂದರ್ಭ ಖುಷಿ ಕೊಡುತ್ತಿದೆ. ನಮ್ಮ ಸಮಾಜದ ಉತ್ಸುಕ ಬರಹಗಾರರಿಗೆ ವೇದಿಕೆಯಾಗಿ ಉದಿಸಿದ ಪತ್ರಿಕೆ ಕತೆ, ಕವಿತೆ, ವಿಚಾರ ಲೇಖನ, ಅನುಭವ ಸಾರಗಳನ್ನು ಹೊತ್ತು ಆನ್ಲೈನ್ ಮೂಲಕ ಓದುಗರ ತಲುಪುತ್ತಿದೆ. ಮಾಸಗಳು ಕಳೆದಂತೆ ತನ್ನ ಮಾಸಿಕ ಕಳೆಯನ್ನು ಕಳೆದುಕೊಳ್ಳದೆ ಹೊಸ ಹೊಸ ವಿಚಾರಗಳು, ಲೇಖನಗಳು, ವ್ಯಂಗ್ಯ ಚಿತ್ರಗಳಿಂದ ಮಿಂಚುತ್ತಾ ಓದುಗರ ಮನಸೂರೆಗೊಳ್ಳುವ ಮಟ್ಟಕ್ಕೆ ಬೆಳೆಯುತ್ತಿರುವುದರ ಕೀರ್ತಿ ಸಂಘ, ಸಂಪಾದಕ ವರ್ಗ ಮತ್ತು ಬೆನ್ನೆಲುಬಾಗಿ ನಿಲ್ಲುವ ಎಲ್ಲಾ ಬರಹಗಾರರಿಗೆ ಸಲ್ಲಿಸುತ್ತಾ ಅಭಿನಂದಿಸುತ್ತೇನೆ.

ಇನ್ನಷ್ಟು ಹೊಸ ವಿಚಾರಗಳೊಂದಿಗೆ ಹೊಸ ಬರಹಗಾರರಿಗೆ ವೇದಿಕೆಯಾಗಿ ಬೆಳೆಯಬೇಕು. ಜೊತೆಗೆ ಈ ಪತ್ರಿಕೆಯನ್ನು ಇತರ ಓದುಗ ಬಂಧುಗಳು ಓದುವಂತಾಗಲು ಸಾಮಾಜಿಕ ಜಾಲತಾಣದ ನಮ್ಮ ಸಮಾಜದ ವೆಬ್ಸೈಟ್ ನಲ್ಲಿ ದೊರೆಯುವಂತಾದರೆ ಒಳಿತು ಎನ್ನುವುದು ಅಭಿಪ್ರಾಯ ಹಾಗು ಆಶಯ. ಈ ಶಿಶು ಅಂಬೆಗಾಲಿಡುತ್ತ ಹೊಸ್ತಿಲು ದಾಟಿ ನಡೆದು ಹೊಸ ಇತಿಹಾಸ ಸೃಷ್ಟಿಸಲಿ. ಶುಭವಾಗಲಿ.

**ನರೇಂದ್ರ ಕಬ್ಬಿನಾಲೆ**

# ಹೊಸತನ
## ಆವಿಷ್ಕಾರ ಮತ್ತು ಬದಲಾವಣೆ ಮೂಲಕ



ಹೊಸತನವ ಕೊಡುವ, ಹೊಸ ವಿಷಯ ಅರಿವ, ಬಯಕೆ ತರುವ ... ಇದು ಎಂಥಾ ಲೋಕವಯ್ಯ? ರೇಡಿಯೋದಲ್ಲಿ "ನಾರದರು" ಭೂಲೋಕ ಕಂಡಾಗ ಅವರ ಆಶ್ಚರ್ಯ ಚಕಿತ, ಅಚ್ಚರಿ ಭರಿತ ಹಾಡು ಕೇಳಿ ಬರ್ತಾ ಇತ್ತು.

ಮಾನವನ ಬಯಕೆ ಅಥವಾ ಆಸೆಯೇ ಆವಿಷ್ಕಾರಕ್ಕೆ ಮೂಲ. ಆವಿಷ್ಕಾರಗಳು ಹೊಸತನವನ್ನು ನೀಡುವುದು. ಹೊಸತನವೇ ಬದಲಾವಣೆ ತರುವುದು. ಜೀವನದಲ್ಲಿ ಬದಲಾವಣೆ ಮಾತ್ರ ಸ್ಥಿರವಾಗಿದೆ.

ಆವಿಷ್ಕಾರವು ಒಂದು ವಿಭಿನ್ನ ಸಾಧನ, ವಿಧಾನ, ಸಂಯೋಜನೆ, ಕಲ್ಪನೆ ಅಥವಾ ಪ್ರಕ್ರಿಯೆಯಾಗಿರಬಹುದು. ಇದು ಪ್ರಗತಿಗೆ ನಾಂದಿಯಾಗಿ ಮಾನವ ಜೀವನಕ್ಕೆ ಹೆಚ್ಚಿನ ಮೌಲ್ಯ ಅಥವಾ ಉಪಯುಕ್ತತೆ ತರುವುದು.

ಮಾನವನ ಹೆಚ್ಚಿನ ಬಯಕೆಗಳು ಪ್ರಕೃತಿಯಿಂದಲೇ ಸ್ಫೂರ್ತಿ ಪಡೆದಿರುವುದು. ಉದಾಹರಣೆಗೆ ಸಾಲ್ಯಾ(ಜೇಡ) ಬಲೆ ನೇಯ್ಗೆ, ಹಕ್ಕಿ ಹಾರಾಟ, ಮೀನಿನ ಈಜಾಟ, ಚಿರತೆಯ ಓಡಾಟ. ಇದಕ್ಕೆ ಪೂರಕವಾಗಿ ಹಲವಾರು ಸಂಶೋಧನೆ ನಡೆಸಿ ಹೊಸದಾದ ಯಂತ್ರ/ ತಂತ್ರಗಳನ್ನು ಮಾನವ ಕಂಡು ಹಿಡಿದ. ಪಂಚಭೂತಗಳಿಂದ, ಅದರಲ್ಲೂ ಮುಖ್ಯವಾಗಿ ಭೂಮಿಯಿಂದಲೇ, ಪ್ರೇರಣೆ ಪಡೆದು ಅನೇಕ ಅದ್ಭುತಗಳೇ ಆವಿಷ್ಕಾರವಾಗಿವೆ. ಒಟ್ಟಿನಲ್ಲಿ ಮೂಲಮಂತ್ರ ಮನು ಕುಲದ ಪ್ರಗತಿ ಸಾದಿಸುವುದು.

ಯಾವುದೇ ಒಂದು ಹೊಸ ವಿಷಯ, ವಸ್ತು, ಘಟನೆ ಕುತೂಹಲವನ್ನು ಕೆರಳಿಸುವುದು. ನಮ್ಮ ಪ್ರದೇಶದಲ್ಲಿ ಹೊಸ ಹೋಟೆಲ್ ಅಥವಾ ಅಂಗಡಿ ಬರುವ ಸಂದರ್ಭದಲ್ಲಿ, ಮೊದಲ ದಿನವೇ ಅದಕ್ಕೆ ಭೇಟಿ ಮಾಡುವ ಬಯಕೆ ಎಲ್ಲರಿಗೂ ಸಹಜವಾಗಿ ಇರುತ್ತದೆ. ಏಕೆಂದರೆ ಅಲ್ಲಿ ತುಂಬ ಹೊಸದಾದ, ಸೊಗಸಾದ ಉತ್ಪನ್ನಗಳು, ಇಲ್ಲ ಹೊಸ ಬಗೆಬಗೆಯ ತಿಂಡಿ ತಿನಿಸುಗಳು ಇರುತ್ತದೆ, ಹಾಗೆಯೆ ಕಡಿಮೆ ಬೆಲೆಗೂ ಸಿಗಬಹುದು ಅಂತ ನಿರೀಕ್ಷೆ. ಇದು ಹೊಸ ಚಲನ ಚಿತ್ರಕ್ಕೆ ಸಹ ಅನ್ವಯಿಸುತ್ತದೆ. ಇಲ್ಲಿ ಕುತೂಹಲ(ಲಿಗಳೆ) ಜಾಸ್ತಿ. ಮನೋರಂಜನೆ ಜೊತೆಗೆ, ಹಳೆ ಕಥೆಯಲ್ಲೂ ಹೊಸತನದ ನಿರಂತರ ಹುಡುಕಾಟ. ಆದರೆ ಮೊದಲ ದಿನ ನೋಡಿದರೆ ಮಾತ್ರ ಚಲನ ಚಿತ್ರ ತಾಜಾ (ಫ್ರೆಶ್) ಇರುತ್ತದೆಯೇ?

ಒಮ್ಮೆ ನಮ್ಮ ಮನೆ ಮುಂದಕ್ಕೆ ಯಾವುದೋ ಕಾರಣಕ್ಕೆ, ಅಪರಿಚಿತರು ಹೊಸ ಕಾರ್ ತಂದು ನಿಲ್ಲಿಸಿದ್ದರು. ನಮ್ಮ ಪಕ್ಕದ ಮನೆಯಾತ ತಕ್ಷಣ ಬಂದು, ಒಂದೇ ಉಸಿರಿನಲ್ಲಿ ಇದು ನಿಮ್ಮ ಹೊಸ ಕಾರು, ಬದಲಾಯಿಸಿದ್ರಾ, ಏನಾದ್ರು ಹಳೆ ಕಾರು? ಬೇರೆ ಪ್ರಶ್ನೆಗಳ ಸುರಿಮಳೆಗೆ ಮೊದಲೇ ನಾನು ಉತ್ತರಿಸಿದೆ. ಇಲ್ಲಾ ಸಾರ್, ಯಾರೋ ಪಾರ್ಕ್ ಮಾಡಿದ್ದಾರೆ ಅಂದೆ. ಆತನಿಗೆ ತುಂಬ ಸಮಾಧಾನವಾಯಿತು (ಅರ್ಥಾತ್ ಹೊಟ್ಟೆ ಉರಿಸಿಕೊಳ್ಳಲಿಲ್ಲ). ಏಕೆಂದರೆ ಅದು ಉನ್ನತವಾದ ಅರ್ಧ ಕೋಟಿಗೂ ಅಧಿಕ ಬೆಲೆಯ ಕಾರು ಆಗಿತ್ತು. ಅವನ ಮುಖದ ಭಾವ ಸ್ಪಷ್ಟವಾಗಿ ಹೇಳ್ತಾ ಇತ್ತು, ಅದೇ ಅಂದುಕೊಂಡೆ, ನಿಮ್ಮ ಕಾರ್ ಇರುವ ಸಾಧ್ಯತೆ ಇಲ್ಲ ಅಂತ. ನೆರೆಮನೆಯೇ ಇರಲಿ, ನೆರೆ ರಾಷ್ಟ್ರವೇ ಇರಲಿ ಸುಮ್ಮನೆ ತಂಟೆಗೆ ಬರುವುದು ಅವರ ಜನ್ಮಸಿದ್ಧ ಹಕ್ಕು ಅಂದುಕೊಳ್ಳುತ್ತಾರೆ. ಈ ಭಾರಿಯಂತೂ ಅವರಿಗೆ ಸರಿಗಾಗಿ ಉತ್ತರ ಸಿಕ್ಕಿದೆ, ತಿರುಗಿ ಸದ್ಯಕ್ಕೆ ಬರಲಿಕ್ಕಿಲ್ಲ ಎಂಬ ಸದೃಢವಾದ ನಂಬಿಕೆ ಇದೆ.

ಮಾಧ್ಯಮಗಳು "ಬ್ರೇಕಿಂಗ್(Breaking) ನ್ಯೂಸ್" ಅಂತ ಹೇಳಿ ನಮಗೆ ಹೊಸ ಸುದ್ದಿ ಹೇಳುವ ಶತ ಪ್ರಯತ್ನ ಮಾಡಿಸುತ್ತಾರೆ. ಸಾಮಾಜಿಕ ಮಾಧ್ಯಮಗಳಂತೂ ಹೊಸದಾದ ಸುಳ್ಳು ಸುದ್ದಿಗಳ ಮೂಲಕವೇ ಭಯಪಡಿಸಿ ಬಿಡುತ್ತಾರೆ. ಇಲಿಗೆ ಹುಲಿ!!! ನದಿ ಮೂಲ ಮತ್ತು ಋಷಿ ಮೂಲ ಹುಡುಕಬಾರದು ಅಂತಾರೆ. ಈ ದಿನಗಳಲ್ಲಿ ಸುದ್ದಿಯ ಮೂಲ ಹುಡುಕಿದರೆ ಖಂಡಿತ ಸಿಗೋದೇ ಇಲ್ಲ ಮತ್ತು ಸುದ್ದಿಯ ನಿಖರತೆ ಬಗ್ಗೆ ಖಚಿತತೆ ಇಲ್ಲವೇ ಇಲ್ಲ. ಯುದ್ಧದ ಸನ್ನಿವೇಶ ಸಹ ಇದಕ್ಕೆ ಹೊರತಾಗಿಲ್ಲ. ಸನ್ನಿವೇಶದ ವ್ಯಕ್ತಿ ಅಥವಾ ಸರಕಾರಗಳು ಮತ್ತು ಸುಳ್ಳು ಸುದ್ದಿಯನ್ನು ಸುಳ್ಳು ಎಂದು ಸಾಬೀತುಪಡಿಸಲು/ ನಿಯಂತ್ರಿಸಲು ಬಹಳ ಪರಿಶ್ರಮ ಮತ್ತು ಹರ ಸಾಹಸ ಪಡಬೇಕಾಗಿದೆ. ಆದರೂ ಇತ್ತೀಚೆಗೆ ಈ ಮೆಸೇಜ್ ಅನ್ನು 5-10 ಜನಕ್ಕೆ ಮತ್ತೆ ಕಳುಹಿಸಿ ಅಂತ ಬರೋದು ಕಡಿಮೆ ಆಗಿದೆ.

ಹೊಸತನ ಮತ್ತು ಬದಲಾವಣೆಗಳು ತುಂಬ ನಿಕಟವರ್ತಿಗಳು. ಬದಲಾವಣೆ ಹೊಸತನವನ್ನು ತಂದೇ ತರುವುದು. ಜೀವನದ ಬಹು ಮುಖ್ಯ ಭಾಗವಾದ ಸಂಘ/ ಸಂಸ್ಥೆಗಳಲ್ಲಿ ಅಥವಾ ಉದ್ಯಮಗಳಲ್ಲಿ ಸಹ ಬದಲಾವಣೆ ಅತ್ಯಗತ್ಯ. ಬದಲಾವಣೆ ಆಗಲು ಹೊಸ ಆಲೋಚನೆಗಳು(ವಿಚಾರಗಳು) ಬೇಕೇ ಬೇಕು.

ಹೊಸ ಆಲೋಚನೆಗಳು ಆವಿಷ್ಕಾರಕ್ಕೆ ನಾಂದಿಯಾಗುವುದು. ಹಾಗಾದರೆ, ಬದಲಾವಣೆ ತರುವುದು ತುಂಬ ಸುಲಭ ಸಾಧ್ಯವೇ? ಬದಲಾವಣೆ/ಹೊಸತನ ಯಾವತ್ತೂ ಪ್ರತಿರೋಧ(Resistance)ಕ್ಕೆ ಒಳಗಾಗಿ ಬದಲಾವಣೆಯಾಗುವುದು ಸರ್ವೇ ಸಾಮಾನ್ಯ. ಅದಕ್ಕೆ ಕಾರಣಗಳು ಅನೇಕ ಇರಬಹುದು ಅಲ್ವಾ, ಅದರಲ್ಲಿ ಕೆಲವು ಹೀಗಿದೆ:

1. ಪುರಾತನ ಕಾಲದಿಂದ ನಡೆದುಕೊಂಡ ಬಂದುದನ್ನು ಯಾಕೆ ಬದಲಾವಣೆ ಮಾಡಬೇಕು?
2. ಬದಲಾವಣೆಯಿಂದ ಲಾಭ ಏನು ಮತ್ತು ಯಾರಿಗೆ? ನಷ್ಟವೇ ಆಗೋದು ಅನಿಸುತ್ತಿದೆ.
3. ಇದನ್ನು ಅನೇಕ ಭಾರಿ ಪ್ರಯತ್ನಿಸಿಯಾಗಿದೆ ಮತ್ತು ಯಶಸ್ವೀ ಆಗೋಲ್ಲ ಖಂಡಿತಾ.
4. ಸಂಪನ್ಮೂಲಗಳು (ಸಮಯ, ಹಣ, ಜನ ಇತ್ಯಾದಿ) ಲಭ್ಯ ಇಲ್ಲ ಮಾಡಲಿಕ್ಕೆ.
5. ಅಸ್ಥಿರತೆ ಮತ್ತು ಸುರಕ್ಷತೆ ಬಗ್ಗೆ ಅನಗತ್ಯ ಕಾಳಜಿ.




ಇದರ ಜೊತೆಗೆ ಧೈರ್ಯ, ಆತ್ಮವಿಶ್ವಾಸ, ದೃಢತೆ ಇತ್ಯಾದಿಗಳ ಕೊರತೆ, ಸಂಬಂಧ ಪಟ್ಟ ವ್ಯಕ್ತಿಗಳ ಅರಿಷಡ್ವರ್ಗಗಳು ಕೂಡ ನಕ್ಷತ್ರಿಕ ತರಹ ಕಾಡಬಹುದು.

ಒಮ್ಮೆ ಬದಲಾವಣೆಗೆ ನಾವು ಸಿದ್ಧ/ಬದ್ಧ/ದಿಟ್ಟರಾದರೆ ಮುಂದಿನ ಪ್ರಾಮುಖ್ಯವಾದ ಕೆಲವು ಹೆಜ್ಜೆಗಳು:

1. ಫಲಿತಾಂಶ ಅಥವಾ ಗುರಿಯ ಬಗ್ಗೆ ಸ್ಪಷ್ಟತೆಯನ್ನು ತರುವದು.

2. ಬೇಕಾಗಿರುವ ಸಂಪನ್ಮೂಲಗಳ ಬಗ್ಗೆ ಗಮನ ಹರಿಸಿ, ಅವುಗಳನ್ನು ಒಟ್ಟುಗೂಡಿಸುವ ಬಗೆಗೆ ವಿಚಾರ ವಿನಿಮಯ ಮಾಡುವುದು.

3. ಹೊಸ ಕಲಿಕೆಗಳು ಬೇಕಾದಲ್ಲಿ, ತರಬೇತಿ ಪಡೆಯುವುದು, ತಜ್ಞರ ಸಲಹೆ ಪಡೆಯುವುದು/ ಬಳಸಿಕೊಳ್ಳುವುದು.

4. ದೊಡ್ಡ ಕಾರ್ಯಗಳನ್ನು ಸಣ್ಣದಾದ/ ನಿರ್ವಹಿಸಬಹುದಾದ ಕಾರ್ಯಗಳಾಗಿ ವಿಂಗಡಣೆ ಮತ್ತು ಹಂಚಿಕೆ.

5. ಕಾಲ ಕಾಲಕ್ಕೆ/ಮಧ್ಯಂತರ ವಿಮರ್ಶೆ/ಪರೀಕ್ಷೆ ಮಾಡಿ, ಯಾವುದು ಸರಿಯಾಗಿ ಕೆಲಸ ಮಾಡುವುದೋ ಅದನ್ನು ಮುಂದುವರಿಸುವುದು. ಏನಾದರೂ ವೈಫಲ್ಯಗಳು ಇದ್ದಲ್ಲಿ ಸೂಕ್ತ ತಿದ್ದುಪಡಿ ಮಾಡುವುದು. ಬಳಕೆದಾರರಿಗೆ ನಿರಂತರ ಸುಧಾರಣೆ ನೀಡುವುದು.

ತಾಂತ್ರಿಕ ರಂಗದಲ್ಲಿ ಬದಲಾವಣೆ ಮತ್ತು ಆವಿಷ್ಕಾರಗಳು ಕ್ಷಿಪ್ರ ಗತಿಯಲ್ಲಿ ಸಾಗುತ್ತಿದೆ. ಈ ದಿನಗಳಲ್ಲಿ ಅಂಗೈನಲ್ಲೇ ಅರಮನೆ (ಸೆರೆಮನೆ?) ತಂದ ಅತ್ಯದ್ಭುತ ಆವಿಷ್ಕಾರ ನಮ್ಮ ನಿಮ್ಮೆಲ್ಲರ ನೆಚ್ಚಿನ "ಫೋನ್". ಗೂಗಲ್ ಮತ್ತು ಅನೇಕ ಅಪ್ (App) ಗಳೊಂದಿಗೆ ಜೀವನವನ್ನು ತುಂಬ ಸರಳೀಕರಿಸಿದೆ. ಅದೇ ರೀತಿ ಸಮಯವನ್ನು ಮನೋರಂಜನಾತ್ಮಕವಾಗಿ ಉಪಯೋಗಿಸುವವರಿಗೆ 24 ಗಂಟೆಗಳು ಬೇಕಾದರೂ ಬಳಸಬಹುದು. ಫೋನ್ ಒಂದು ಸಮಾನಾಂತರ ವಿಶ್ವ (Parallel Universe) ಸೃಷ್ಟಿಸಿದೆ ಅಂದರೆ ತಪ್ಪಾಗದು.

AI/Chat GPT/ಡ್ರೈವರ್ ಇಲ್ಲದ ಕಾರುಗಳ ತರಹ ಹತ್ತು ಹಲವು ಆವಿಷ್ಕಾರಗಳು ಗಣನೀಯ ಬದಲಾವಣೆಗಳನ್ನು ತರುತ್ತಿವೆ. ಜೀವನ ಮತ್ತು ಕಾರ್ಯ ಶೈಲಿಯನ್ನು ಬದಲಾಯಿಸುತ್ತಾ ಇದೆ.

ಅಣ್ವಸ್ತ್ರ ಅಥವಾ ಜೈವಿಕವಾಗಿ ಬಂದ ಕೊರೊನ ವೈರಸ್, ರಕ್ಷಣೆ ಮತ್ತು ಸಂಶೋಧನೆಯಿಂದ ಬಂದ ಆವಿಷ್ಕಾರಗಳು. ಇಂಥವುಗಳ ಬಗ್ಗೆ ಎಚ್ಚರಿಕೆ ಇಲ್ಲದೆ ಇದ್ದಲ್ಲಿ, ಮುಂದೊಂದು ದಿನ, ಮಾನವ ಜನಾಂಗಕ್ಕೆ ಅಪಾಯವಾಗಲೂ ಬಹುದು.

ಇನ್ನು ಕೆಲವು ಆವಿಷ್ಕಾರಗಳು ಯಾವ ರೀತಿಯ ಪ್ರತಿಕೂಲವಾದ ಪರಿಣಾಮಗಳನ್ನು ಬೀರಬಹುದು ಅಂತ ಸಮಯವೇ ಇನ್ನು ಹೇಳಬೇಕು. ಕಾಲಾಯ ತಸ್ಮೈ ನಮಃ.

ವೇಗವಾಗಿ ಮುಂದಕ್ಕೆ, ೨೦೩೦ ರ ಒಂದು ದಿನ, ಪಕ್ಕದ ಮನೆಯಾತನಿಗೆ ಏನೋ ಪ್ರಶ್ನೆ ಇದ್ದ ಹಾಗೆ ಇದೆ, ಏಕೆಂದರೆ ನಮ್ಮನೆ ಮುಂದೆ ಯಾರದ್ದೋ ಹೊಸ ಡ್ರೋನ್ ಈಗಷ್ಟೇ ಬಂದಿಳಿದ ಹಾಗಿದೆ (ಅವರ ಎಲ್ಲ ಡ್ರೋನ್ ನಾಶ ಮಾಡಿಕೊಂಡರಲ್ಲ)!!!

ಶೆಟ್ಟಿಗಾರ ವಾಣಿ ಪತ್ರಿಕೆ ಸಹ ಸಾಮಾಜಿಕವಾಗಿ ಹೊಸತನವನ್ನು ತರುತ್ತಿದೆ. ಒಂದು ವರ್ಷ ದಾಟಿದ ಅದು ಹೀಗೆಯೇ "ಯಶಸ್ವಿ"ಯಾಗಿ ಮುಂದುವರಿಯಲಿ, ಬದಲಾವಣೆ ತರಲಿ ಮತ್ತು ಸ್ಫೂರ್ತಿದಾಯಕವಾಗಿರಲಿ ಎಂದು ಶುಭ ಹಾರೈಕೆ.



ರಾಮಕೃಷ್ಣ ಸಾಲಿಕೇರಿ
ಬೆಂಗಳೂರು




# ಮದ್ಯ ಪ್ರಿಯರು!

ಕಂಠೀರವ ಸ್ಟುಡಿಯೋ ಪಕ್ಕ ಇರೋ ಮಹಾರಾಣಿ ಬಾರ್ ನಲ್ಲಿ ಮೂರು ಮೂರು ಬಾಟಲ್ ಅಲ್ಟ್ರಾ max ಕುಡಿದು ಅಮಲು ಜಾಸ್ತಿ ಆಗಿ ಹೊರಗೆ ಬಂದು ಫುಟ್ಪಾತ್ ಮೇಲೆ ಕೂತ ಕೃಷ್ಣ ತನ್ನ ಮೊಬೈಲ್ ತೆಗೆದು ರಂಗನಿಗೆ ಕಾಲ್ ಮಾಡಿದ. ಜೊತೆಲಿದ್ದ ಬಸ್ಯ ಅವನ ಪಕ್ಕ ಕೂತು ಆಕಾಶದಲ್ಲಿದ್ದ ನಕ್ಷತ್ರಗಳೆಲ್ಲ ಎಲ್ಲಿ ಮಾಯವಾದವು ಎಂದು ಯೋಚಿಸುವಷ್ಟರಲ್ಲಿ...

ಕೃಷ್ಣ ಮೊಬೈಲ್ ನಲ್ಲಿ "ಮಚ್ಚಾ ನಾಳೆ ಬೆಳ್ಗೆ ಒಂದ್ ಡೀಲ್ ಮುಗಿಸ್ಬೇಕು. ಅವ್ನಯ್ಯನ್, ನಮ್ ಹುಡ್ಗಿಗೆ ಡ್ರಾಪ್ ಮಾಡಿದ್ನಲ್ಲ ಮೊನ್ನೆ, ಅವ್ನ ಅಡ್ರೆಸ್ ಸಿಕ್ಕೈತೆ ಮಗ. ನಾಳೆ ಬೆಳಿಗ್ಗೆ ಅವನ್ ಗಾಡಿ ಸ್ಟಾರ್ಟ್ ಆಗ್ಬಾರ್ದು ಮಗ. ಅವ್ನ ಎತ್ಬಿಡೋದೇ. ನೀನ್ ರೇಜರ್ ತಗೊಂಡ್ ಬಾ, ನಮ್ ಜೊತೆ ಬ್ಲೇಡ್ ಇರ್ತಾನೆ. ಹೆಲ್ಮೆಟ್ ಹಾಕೊಂಡ್ ಬಾ ಮಗ ಮರಿಬೇಡ. ಬೆಳಿಗ್ಗೆ 6 ಗಂಟೆಗೆ ಮಿಸ್ ಕಾಲ್ ಹಾಕ್ತೀನಿ. ಮಗ ಮರೀಬೇಡ ಲೆ. ನಾಳೆ ಅವ್ನ ಎತ್ತಿದ್ಮೇಲೆ, ನಮ್ನ ಪೊಲೀಸ್ ಟ್ರ್ಯಾಕ್ ಮಾಡಿ ಅರೆಸ್ಟ್ ಮಾಡಿದ್ರೆ ಏನು ಹೆದ್ರ್ಬೇಡ. ನಿನ್ ಹೆಸ್ರು ರೇಜರ್ ರಂಗ ಅಂತ ಹೇಳು. ನಾನು ಕೂರುಪ್ ಕೃಷ್ಣ ಅಂತ ಹೇಳ್ತೀನಿ. ಇವ್ನಿಗೆ ಬ್ಲೇಡ್ ಬಸ್ಯ ಅಂತ ಹೇಳಕ್ ಹೇಳ್ತೀನಿ, ಓಕೇನ ಮಗ? ಅಷ್ಟೇ ಮಗ ಮಲಿಕ್ಕೊ. ಏನಾದ್ರೂ ಬೇಕಂದ್ರೆ ಹೇಳೋ ಲೈ. ನೀನ್ ನನ್ ತಮ್ಮ ತರ ಮಗ. ಮಗ ಲೈ, ಹೆಲ್ಮೆಟ್! ಮರಿ ಬೇಡ ಮಗ."

ಇದನ್ನು ಪಕ್ಕದಲ್ಲೇ ಕೂತು ಕೇಳಿಸಿಕೊಳ್ಳುತ್ತಿದ್ದ ಬಸ್ಯ "ಒಂದ್ ಇರುವೆ ಸಾಯಿಸಿಲ್ಲ ಇಲ್ಲಿ ತನಕ, ಹೋಗ್ಲಿ ಬಿಡು ಒಂದ್ ನಾಯಿಗೂ ಕುರುಪ್ ಹಾಕ್ದೀರಾನೇ ಇವ್ನಿಗೆ ಇವ್ನೆ ಕುರೂಪ್ ಅಂತ prefix ಹಾಕೊಂಡ್ಬಿಟ್ಟಿದ್ದಾನಲ್ಲ? ಇವ್ನ ಇವ್ನೆ ಎನ್ ಅಂಕೊಂಡಿದ್ದಾನೆ ಅಂತ? ಲೈ. ಎಲ್.ಕೆ.ಬಿ. ಏನೋ ಅವ್ನ ಎತ್ ಬಿಡ್ತೀನಿ ಇವ್ನ ಎತ್ ಬಿಡ್ತೀನಿ ಅಂತೀದೀಯಲ್ಲ. ಅವ್ಳೆನ್ ನಿನ್ನ ಪ್ರೀತಿಸ್ತಿದ್ದಾಳೇನೋ? ಹೋಗ್ಲಿ ಅವಳ್ನ ಒಂದ್ ಸಲ ಆದ್ರೂ ಮಾತಾಡ್ಸಿದ್ದಿಯಾ? ಈ ಸಿಲ್ಲಿ ರೀಸನ್ ಗೆಲ್ಲಾ ಜೈಲ್ಗೆ ಹೋಗ್ಬೇಡ ಮಗ. ದೊಡ್ಡದ್ದು ಏನಾದ್ರೂ ಮಾಡು. ನಿನ್ ಹುಡ್ಗಿ ಕಥೆ ಬಿಡು."

ಕೃಷ್ಣ ಕಾಲ್ ಕಟ್ ಮಾಡದೇನೆ "ಹೂಂ ಮಗ ನೀನ್ ಹೇಳೋದು ಕರೆಕ್ಟ್. ಆದ್ರೂ ಮಗ ಅವಳಂದ್ರೆ, ನನಗೆ ಜೀವ ಇದ್ದಾಗೆ ಮಗ. ಅವಳು, ನನ್ ಬೈಕ್ ಮೇಲೆ ತಾನೇ ಕೂತ್ಕೋಬೇಕು. ಅವ್ಳ್ ಯಾವನೋ ಜೊತೆ ಮನೆ ತನಕ ಡ್ರಾಪ್ ಮಾಡಕೊಂಡಿದ್ದಾಳಲ್ಲ. ಅದ್ಕೆ ಮಗ ಉರಿತಿರೋದು ನನಗೆ. ಲೈ... ರಂಗ.. ಇದ್ದಿಯೇನೋ.. ಲೈ ರೇಜರ್.. ಮಲಗ್ಬಿಟ್ಟಾ? ನಾಳೆ ಬಾರೋ ಮಗ. ಮಿಸ್ ಕಾಲ್ ಕೊಡ್ತೀನಿ.. ಗೂಡ್ ನೈಟ್ ಮಗ."

"ನನಗೇನೋ ಈ ಡೀಲ್ ಬೇಡ ಅನ್ಸುತ್ತೆ. ಅವ್ಳ ಮನೆ ಮುಂದೆ ಹೋಗಿ ಇವಾಗ್ಲೆ ಪ್ರಪೋಸ್ ಮಾಡ್ಬಿಡು ಮಗ. ಇಷ್ಟ ಇದ್ರೆ ಹೂ ಅಂತಾಳೆ, ಇಲ್ಲಾಂದ್ರೆ ಅವ್ಳ್ನ ಎತ್ತಾಕೊಂಡ್ ತಿರುಪತಿಗೆ ಡೈರೆಕ್ಟ್ ಆಗಿ ಹೋಗಣ. ಒಂದ್ ಮಂಗಳಸೂತ್ರ ಇಟ್ಕೋ. ಅಲ್ಲೆ ಮದ್ವೆ ಮಾಡ್ಕೋ. ಹೆಂಗೆ ಐಡಿಯಾ?" ಎಂದ ಬಸ್ಯ.

ಕೃಷ್ಣಾ: ಒಳ್ಳೆ ಐಡಿಯಾ ಮಗ. ಆದ್ರೆ, ನನ್ ಸ್ಪ್ಲೆಂಡರ್ ಮೇಲೆ ಅವ್ಳ್ನ ಹೆಂಗೋ ಎತ್ತಾಕೊಂಡ್ ಹೋಗೊದು?

ಬಸ್ಯ: ಥು ಲೊಪರ್! ಕಾರ್ ಅಲ್ಲಿ ಎತ್ತಾಕೊಂಡ್ ಹೋಗಣ ಮಗ.

ಕೃಷ್ಣ: ಕಾರ್ ಎಲ್ಲೋ ಇದೆ?

ಬಸ್ಯ: ಓಲ ಬುಕ್ ಮಾಡನ ಮಗ. ನಾನು ಹೊರಗೆ ನಿಂತಿರ್ತಿನಿ. ನೀನು ಅವಳ ಮನೆಗ್ ಹೋಗಿ, ಅವಳ ಕೈ ಕಟ್ಟಿ ಬಾಯಿಗೆ ಕರ್ಚೀಪ್ ಹಾಕಿದ್ ತಕ್ಷಣ ನನಗೆ ಮಿಸ್ ಕಾಲ್ ಕೊಡು. ನಾನು  ಓಲಾ ಬುಕ್ ಮಾಡ್ತಿನಿ. ನೀನ್ ಅವ್ಳ್ನ ಎತ್ತಾಕೊಂಡ್ ಬರಬೇಕಾದರೆ ನಾನು ಅಷ್ಟ್ರಲ್ಲಿ ಡ್ರೈವರ್ಗೆ ಸುಳ್ಳು ಹೇಳಿ ಸೆಟ್ ಮಾಡಿರ್ತಿನಿ.

ಕೃಷ್ಣ: ಮಚ್ಚಾ! ಇನ್ನೋವಾ ಬುಕ್ ಮಾಡೋ. ಮಲಿಕ್ಕೊಂಡ್ ಹೋಗಣ. ಆದ್ರೂ ಏನೇ ಹೇಳು ಮಗ ಅವ್ಳು ನನಗೆ ಒಂದ್ಥರ ಜೀವ ಇದ್ದಾಗೆ ಮಗ.

ಬಸ್ಯ: ಇನ್ನೋವಾ ಕಾಸ್ಟ್ಲಿ ಮಗ. Ok ನಿನಗೋಸ್ಕರ ಅದ್ನೆ ಮಾಡನ ತಗೋ. ಆದ್ರೆ ದುಡ್ಡು?

ಕೃಷ್ಣ: ಮಗ ನನ್ ಹತ್ರ ಅಷ್ಟೊಂದ್ ಇಲ್ಲ. ಆದ್ರೆ ಒಂದ್ ಐಡಿಯಾ ಇದೆ. ಹಿಂಗೆ ಹಿಂದೆ ನಡ್ಕೊಂಡ್ ಹೋದ್ರೆ, ಇಸ್ಕಾನ್ ಸಿಗುತ್ತೆ. ಅವ್ರ ಹತ್ರ ದೊಡ್ ಹುಂಡಿನೆ ಇದೆ. ಅದ್ನೇ ಎತ್ತಾಕೊಂಡ್ ಓಡೋಗಣ. ಫುಲ್ ಲೈಫ್ ಸೆಟ್ಲ್ ಆಗ್ಬಿಡುತ್ತೆ.

ಬಸ್ಯ: ಹಂಗಾದ್ರೆ, ನಿನ್ ಹೆಸ್ರು ಕುರೂಪ್ ಕೃಷ್ಣ ಬದ್ಲು ಕಳ್ ಕೃಷ್ಣ ಅಂತ ಚೇಂಜ್ ಮಾಡ್ಕೋ. ಹೆಂಗು ಕೃಷ್ಣನ್ ದೇವಸ್ಥಾನದಲ್ಲಿ ದುಡ್ ಎತ್ಕೊಂಡು ನಿನ್ ರಾಧೆನ ಮದ್ವೆ ಆಗೋ ಕನಸು ಕಾಣ್ತಿದ್ದೀಯಾ. ದೇವ್ರೇನು ನಿನ್ಮೇಲೆ ಕೋಪ ಮಾಡ್ಕೊಳ್ಳಲ್ಲ ಬಿಡು.

ಕೃಷ್ಣ: ಅವಳ ಹೆಸ್ರು ರಾಧಾನ ಮಗ? ನಿನಗೆ ಹೆಂಗೋ ಗೊತ್ತಾಯ್ತು?

ಬಸ್ಯ: ಮಗ. ನೀನ್ ಮದುವೆ ಆಗ್ತಿಯ ಅಂದ್ರೆ ಅವ್ಳು ಹೆಸ್ರು ರುಕ್ಮಿಣೀ ನೇ ಆಗಿರ್ಬೇಕು.

ಕೃಷ್ಣ: ನಿಜ, ಅವ್ಳು ರಾಧೆನೋ ರುಕ್ಮಿಣಿನೋ ಗೊತ್ತಿಲ್ಲ. ಆದ್ರೆ ಅವ್ಳು ನನಗೆ ಒಂದ್ ಥರ ಜೀವ ಇದ್ದಾಗೆ ಮಗ.

ಬಸ್ಯ: ಮಗ ಟೈಮ್ ಎಷ್ಟಾಯಿತು ನೋಡೋ. ಬೆಳ್ಳಗೆ 6 ಗಂಟೆಗೆ ರಂಗನ ಎಬ್ಸ್ ಬೇಕಲ್ಲೊ.

ಕೃಷ್ಣ: ಈಗ ತಾನೇ ಹೇಳ್ದೆ ಅವಳ ಮನೆಗೆ ಹೋಗಿ ಅವಳನ್ನ ಎತ್ತಾಕೋಂಡ್ ಹೋಗಣ ಅಂತ. ಬಾ ಮಗ ಅದೇ ಒಳ್ಳೆ ಐಡಿಯಾ. ರಂಗ ಇಷ್ಟ್ ಹೊತ್ಗೆ ಮಲಗಿರ್ತಾನೆ. ಎರಡು ಕಾಲ್ ಮಗ.

ಬಸ್ಯ: ಎರಡೇ ಕಾಲ್ ಇರೋದು ಲೈ! ಕುಡ್ದಿದ್ದೀಯೇನೋ ಲೋಫರ್.

ಕೃಷ್ಣಾ: ಟೈಮ್ ಹೇಳ್ದೆ ಕಣೋ. ಟೂ ಫಿಫ್ಟೀನ್! ಬಾ ಹೋಗಣ. ಅವ್ಳುನು ಇಷ್ಟ್ ಹೊತ್ಗೆ ಮಲಗಿರ್ತಾಳಲ್ಲೋ.

ಬಸ್ಯ: ಅವ್ಳ್ ಮನೆಗೆ ಯಾಕೋ ಹೋಗ್ಬೇಕು ಈಗ. ನೀನ್ ನಿಮ್ ಮನೆಗ್ ಹೋಗು. ನಾನ್ ನಮ್ ಮನೆಗ್ ಹೋಗ್ತೀನಿ.

ಕೃಷ್ಣ: ಮತ್ತೆ ಮದ್ವೆ, ತಿರುಪತಿ ಎಲ್ಲಾ?

ಬಸ್ಯ: ಅದ್ಕೆಲ್ಲ ಸಿಕ್ಕಾಪಟ್ಟೆ ಪ್ಲಾನ್ ಮಾಡ್ಬೇಕು ನಾಳೆ ಸಂಜೆ ಸಿಗು. ಬಿಯರ್ ಬದ್ಲು ವಿಸ್ಕಿ ಒಡ್ದನ. ಒಳ್ಳೆ ಐಡಿಯಾ ಬರುತ್ತೆ.

ಕೃಷ್ಣ: ಹೆಂಗೆ ಮಗ ನಿನಗೆ ಈತರ ಎಲ್ಲಾ ಐಡಿಯಾ ಬರುತ್ತೆ? ಬಾ ಒಂದ್ ಧಮ್ ಒಡ್ಕೊಂಡ್ ಹೋಗಣ.

ಬಸ್ಯ: ಧಮ್ ಇದೆ ಮಗ ನನಗೆ. ನೀನು ನಾಳೆ ಫಿಸ್ ಮಾಡ್ಕೊ. ಫುಲ್ ರೆಡಿ ಆಗಿರು. ಆದ್ರೆ ಏನೇ ಹೇಳು ಮಗ, ಆಕಾಶದಲ್ಲಿ ನಕ್ಷತ್ರಗಳೇ ಕಾಣಿಸ್ತಿಲ್ಲ. ಯಾಕೋ ಹಿಂಗೆ?

ಕೃಷ್ಣ: ಪೊಲ್ಯೂಷನ್ ಮಗ ಪೊಲ್ಯೂಷನ್.

ಬಸ್ಯ: ಇಲ್ಲ ಲೈ. ಕತ್ತಲಾಗಿದೆ ಅದ್ಕೆ ಕಾಣಿಸ್ತಿಲ್ಲ. ಲೈಟ್ ಇದ್ದಿದ್ರೆ ನೋಡಬಹುದಿತ್ತು.

ಕೃಷ್ಣ: ಗುಬಾಲ್! ಕುಡ್ದಿದ್ದೀಯೇನೋ? ಆಕಾಶಕ್ಕೆ ಲೈಟ್ ಹೆಂಗೋ ಹಾಕ್ತಿಯ. ಬೆಳ್ಗೆ ಸೂರ್ಯ ಬಂದ್ಮೇಲೆ ನೋಡು ಕಾಣುತ್ತೆ.

ಬಸ್ಯ: ಒಕೆ ಮಗ. ಮನೆ ಬಂತು. ಗುಡ್ ನೈಟ್!

ಕೃಷ್ಣ: ಗುಡ್ ನೈಟ್ ಮಗ. ಲೈ ಇರೋ. ಏನೇ ಹೇಳು ಮಗ ಅವ್ಳು ನನಗೆ ಒಂದ್ ಥರ ಜೀವ ಇದ್ದಾಗೆ ಮಗ. ಓಕೆ ಟಾಟಾಗು ಬೈ ಬೈ. ಬಿಲ್ಡ್ ಗೂ ಬೈ ಬೈ.



ಯಶಸ್ವಿ ಜೆ
ಜ್ಞಾನಭಾರತಿ
ಬೆಂಗಳೂರು


# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.
- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.
- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.
- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.
- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ
(ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com • ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com • Mob. No. 9845660131**

Estd. 1989

**ದ.ಕ. ಪದ್ಮಶಾಲಿ ಸಮಾಜ ಸೇವಾ ಕೂಟ (ರಿ)**

ಆಡಳಿತ ಕಛೇರಿ: ನಂ. 8, ಶಾಂತವೇರಿ ಗೋಪಾಲಗೌಡ ನಗರ
4ನೇ ಮುಖ್ಯರಸ್ತೆ, ಮೂಡಲಪಾಳ್ಯ, ಬೆಂಗಳೂರು 560072



# ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ

ದಿನಾಂಕ 6-ಜುಲೈ-2025, ಭಾನುವಾರ • ಬೆಳಗ್ಗೆ 9.00 ಗಂಟೆಗೆ

**ಎ.ವಿ.ವರದಾಚಾರ್ ಕಲಾಕ್ಷೇತ್ರ ಮತ್ತು ಮೆಮೋರಿಯಲ್ ಹಾಲ್**

ಎ.ವಿ.ವರದಾಚಾರ್ ರಸ್ತೆ, ನಟರಾಜ ಚಿತ್ರಮಂದಿರದ ಹಿಂದೆ,
ಜೈಭೀಮ್ ನಗರ, ಶೇಷಾದ್ರಿಪುರಂ, ಬೆಂಗಳೂರು 560020